ಸಂಪುಟ : 9 ಸಂಚಿಕೆ 16 ಪುಟ : 4 ಬೆಲೆ : 3.00 ಮಂಗಳವಾರ ಫೆಬ್ರವರಿ 13, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 16 Pages : 4 Price : 3.00 Tuesday February 13, 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಇಂದಿನ ನೀರು ಪೂರೈಕೆ ವಿವರ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಬೆಟಗೇರಿ ಅವಳಿ ನಗರದಲ್ಲಿ ಫೆಬ್ರವರಿ 13ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 22 ಕನ್ನಡ ಶಾಲೆ, ಯಲ್ಲಮ್ಮನ ಗುಡಿ, ಪ್ರಕಾಶ್ ಅಂಗಡಿಯವರ ಲೈನ್, ಆಟೋ ಲೈನ್, ಶಿವಪ್ಪರ ಲೈನ್. ವಾರ್ಡ್ ನಂ. 27, 28 ಸ್ಟೇಡಿಯಂ, ಕುರುಡಗಿ ದವಾಖಾನೆ ಲೈನ್, ಸಜ್ಜನ್ ಕುಲಕರ್ಣಿ ಲೈನ್, ಎಸ್ಬಿ ಸಂಕಣ್ಣವರ ಲೈನ್, ರೊಟ್ಟಿ ಲೇಔಟ್, ಹೊಸಮನಿಯವರ ಲೈನ್, ಕೊಪ್ಪದ ಮಾಸ್ತರ ಲೈನ್, ತಂಬ್ರಳ್ಳಿ ಮಠದ ಲೈನ್, ಕೆ ಚ್ ಪಾಟೀಲರ ಲೈನ್, ನಾಗರಕಟ್ಟಿ ಲೈನ್, ಮಲ್ಲಾಡದರ ಲೈನ್, ವೆಂಕಟೇಶ ಟಾಕೀಸ್ ಲೈನ್.

ವಾರ್ಡ್ ನಂ 34 ಸೇವಾಲಾಲ್ ನಗರ, ಕಡದಳ್ಳಿ ಮಠ, ಅಬ್ಬಿಗೇರಿ ಲೇಔಟ್ ಉಳಿದ ಭಾಗಗಳು. ವಾರ್ಡ್ ನಂ. 27 ಮುಳಗುಂದ ವಕೀಲರ ಲೈನ್, ಮೆಹರವಾಡೆ ಮಾಸ್ತರ್ ಲೈನ್, ಪಾಟವೆಯವರ ಲೈನ್, ಹುಬ್ಬಳ್ಳಿ ವಕೀಲರ ಲೈನ್ ಉಳಿದ ಭಾಗಗಳು.

ವಾರ್ಡ್ ನಂ. 6 ನಾವಳ್ಳಿಯವರ ಲೈನ್, ಮಳಲಿಯವರ ಲೈನ್, ಪೂಜಾರ ಲೈನ್. ವಾರ್ಡ್ ನಂ. 15,16,17 ಜವಳಗಲ್ಲಿ, ಶಹಪೂರ ಪೇಟೆ, ಮೀನಿನ ಮಾರ್ಕೆಟ್, ಭಜಂತ್ರಿ ಓಣಿ, ಡಿಸಿ ಮಿಲ್ ರೋಡ್, ಮಹೇಂದ್ರಕರ್ ಸರ್ಕಲ್ ರಸ್ತೆ, ಗಾಂಧಿ ಸರ್ಕಲ್ ರಸ್ತೆ, ಅಂಗನವಾಡಿ ಶುದ್ಧ ನೀರಿನ ಘಟಕದ ಸುತ್ತಮುತ್ತಲಿನ ಲೈನ್‌ಗಳು, ಬಸವೇಶ್ವರ ಗುಡಿ, ಗಣೇಶ ಗುಡಿ ಉಳಿದಭಾಗಗಳು.

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ರಾಜಕೀಯ ವಿರೋಧ । ಬಡವರ ಸ್ವಂತ ಸೂರಿನ ಕನಸು ಗಗನ ಕುಸುಮ

# ಆಶ್ರಯ ಮನೆ ಹಂಚಿಕೆಗೆ ಬಿಡದ ಗ್ರಹಣ




**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಸೂರಿಲ್ಲದವರಿಗೆ ಸ್ವಂತ ಸೂರು ಕಲ್ಪಿಸಲು ಆಶ್ರಯ ಯೋಜನೆಯಡಿ ಹತ್ತಾರು ವರ್ಷಗಳ ಹಿಂದೆಯೇ ಸರಕಾರದಿಂದ 59 ಎಕರೆ ಜಮೀನು ಖರೀದಿಸಲಾಗಿದೆ. ಆದರೆ ರಾಜಕೀಯ ದೊಂಬರಾಟದಿಂದ ಬಡವರ, ನಿರ್ಗತಿಕರ ಸ್ವಂತ ಸೂರಿನ ಕನಸು ಗಗನ ಕುಸುಮವಾಗಿದೆ.

> ಶಿಗ್ಲಿ ರಸ್ತೆಯಲ್ಲಿನ 32 ಎಕರೆ ಜಮೀನಿನಲ್ಲಿ ನಿವೇಶನ ಹಂಚಲು ಈಗಾಗಲೇ ರಾಜೀವ್ ಗಾಂಧಿ ವಸತಿ ನಿಮಗಮಕ್ಕೆ ಸಲ್ಲಿಕೆಯಾದ ಆಯ್ಕೆ ಪಟ್ಟಿಯಲ್ಲಿ ಅನರ್ಹ ಫಲಾನುಭವಿಗಳಿದ್ದಾರೆ. ಇದರಿಂದ ನಿವೇಶನಗಳು ಉಳ್ಳವರ ಪಾಲಾಗುತ್ತವೆ, ಅರ್ಹರು ನಿರ್ಗತಿಕರಾಗುತ್ತಾರೆ. ಆದ್ದರಿಂದ ಈ ಪಟ್ಟಿ ರದ್ದುಪಡಿಸಬೇಕೆಂದು ನಿಗಮಕ್ಕೆ ಪತ್ರ ಬರೆದಿದ್ದೇನೆ. ಪತ್ರದನ್ವಯ ಈಗ ಪಟ್ಟಿ ಪರಿಶೀಲನೆ ಪ್ರಕ್ರಿಯೆಯೂ ನಡೆದಿದ್ದು, ಯಾವುದೇ ಮುಲಾಜಿಲ್ಲದೇ ಅರ್ಹ ಫಲಾನುಭವಿಗಳಿಗೆ ನಿವೇಶನ ಹಂಚುವ ಕಾರ್ಯ ಮಾಡುತ್ತೇನೆ.
>
> **– ಡಾ. ಚಂದ್ರು ಲಮಾಣಿ.**
> ಶಾಸಕರು, ಶಿರಹಟ್ಟಿ.

2014ರಲ್ಲಿ ಮಾಜಿ ಶಾಸಕ ರಾಮಕೃಷ್ಣ ದೊಡ್ಡಮನಿ ಅವರ ಅವಧಿಯಲ್ಲಿ ಆಶ್ರಯ ಯೋಜನೆಯಡಿ ನಿವೇಶನ ನೀಡುವ ಉದೇಶದಿಂದ 16 ಎಕರೆ 16 ಗುಂಟೆ, 2017ರಲ್ಲಿ 32 ಎಕರೆ 27 ಗುಂಟೆ ಹಾಗೂ 9 ಎಕರೆ 38 ಗುಂಟೆ ಹೀಗೆ ಒಟ್ಟು 59 ಎಕರೆ ಜಮೀನು ಖರೀದಿಸಲಾಗಿದೆ. ಇದರಲ್ಲಿ ಒಟ್ಟು 2132 ಫಲಾನುಭವವಿಗಳಿಗೆ ನಿವೇಶನ ಕಲ್ಪಿಸಬಹುದಾಗಿದೆ.

▸▸3ನೇ ಪುಟಕ್ಕೆ



> ಆಶ್ರಯ ಫಲಾನುಭವಿಗಳ ಆಯ್ಕೆಯಲ್ಲಿ ಅರ್ಹರಿಗೆ ಅನ್ಯಾಯವಾಗಿದೆ ಎಂದು ಶಾಸಕ ಡಾ.ಚಂದ್ರು ಲಮಾಣಿ ಒಂದು ಕಡೆ ಪಟ್ಟಿ ತಡೆಯುವ ರಾಜಕೀಯ ತಂತ್ರ ಮಾಡಿದ್ದಾರೆ. ಮತ್ತೊಂದೆಡೆ ಅಧಿಕಾರ ಮತ್ತು ಅಧಿಕಾರಿಗಳ ದುರ್ಬಳಕೆ ಮಾಡಿಕೊಂಡು ತಮಗೆ ಬೇಕಾದಂತೆ ಫಲಾನುಭವಿಗಳ ಪಟ್ಟಿ ಸಿದ್ಧಪಡಿಸಿ ಯಾರೋ ತಂದ ಯೋಜನೆಯಲ್ಲಿ ತಮ್ಮ ಹೆಸರು ಮಾಡಿಕೊಳ್ಳುವ ಹುನ್ನಾರ ನಡೆಸಿದ್ದಾರೆ. ನಿಜವಾಗಿಯೂ ಗುಡಿಸಲುವಾಸಿಗಳಿಗೆ, ನಿರ್ಗತಿಕರಿಗೆ, ಮನೆ ಇಲ್ಲದ ಬಡವರಿಗೆ ನಿವೇಶನ ತಲುಪಬೇಕು. ಅದಕ್ಕಾಗಿ ಎಂತಹ ಹೋರಾಟಕ್ಕೂ ಸಿದ್ಧವಾಗಿದ್ದು, ಫೆ. 13ರಂದು ನಡೆಸುತ್ತಿರುವ ನಮ್ಮ ಹೋರಾಟಕ್ಕೆ ಎಲ್ಲ ಹಿರಿಯರ, ಸಂಘಟನೆಗಳ, ಫಲಾನುಭವಿಗಳ, ನಾಗರಿಕರ ಬೆಂಬಲವಿದೆ.
>
> **– ಮಂಜುನಾಥ ಮಾಗಡಿ.**
> ಪಂಚಮಸಾಲಿ ಸಮಾಜದ ತಾಲೂಕಾಧ್ಯಕ್ಷ.
>
> **– ಸುರೇಶ ನಂದೆಣ್ಣವರ.**
> ದಲಿತ ಸಂಘಟನೆಯ ಸಂಚಾಲಕ.

## ಬೆಳಗಾವಿ ವಲಯ ಮಟ್ಟದ ಥ್ರೋಬಾಲ್ ಪಂದ್ಯಾವಳಿ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಇಲ್ಲಿನ ಶ್ರೀಮತಿ ಕಮಲಾ ಮತ್ತು ಶ್ರೀ ವೆಂಕಪ್ಪ ಎಂ.ಅಗಡಿ ಇಂಜಿನಿಯರಿಂಗ್ ಮಹಾವಿದ್ಯಾಲಯದಲ್ಲಿ ಫೆ.13 ಮತ್ತು 14ರಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಬೆಳಗಾವಿ ವಲಯ ಮಟ್ಟದ ಮಹಿಳೆಯರ ಥ್ರೋಬಾಲ್ ಪಂದ್ಯಾವಳಿ ಜರುಗಲಿದೆ.

ಬೆಳಗಾವಿ ವಲಯ ಮಟ್ಟದ ಕಾಲೇಜುಗಳ 10ಕ್ಕೂ ಹೆಚ್ಚು ತಂಡಗಳು ಪಂದ್ಯಾವಳಿಯಲ್ಲಿ ಭಾಗವಹಿಸಲಿವೆ ಎಂದು ಪ್ರಾಚಾರ್ಯ ಡಾ. ಪರಶುರಾಮ ಬಾರಕಿ, ದೈಹಿಕ ಶಿಕ್ಷಣ ನಿರ್ದೇಶಕ ಪ್ರೊ. ಎಸ್. ಎಫ್. ಕೊಡ್ಲಿ ತಿಳಿಸಿದ್ದಾರೆ.

## ಸಂವಿಧಾನ ಜಾಗೃತಿ ಜಾಥಾಕ್ಕೆ ಸಂಭ್ರಮದ ಸ್ವಾಗತ



**■ವಿಜಯಸಾಕ್ಷಿ ಸುದ್ದಿ, ಮುಳಗುಂದ**

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ಮುಳಗುಂದ ಪಟ್ಟಣ ಪಂಚಾಯಿತಿ ಸಹಯೋಗದಲ್ಲಿ ಸೋಮವಾರ ಬೆಳಿಗ್ಗೆ ಗಣೇಶ ದೇವಸ್ಥಾನ ಆವರಣದಿಂದ ಸಂವಿಧಾನ ಜಾಗೃತಿ ಜಾಥಾವನ್ನು ಸಂಭ್ರಮದಿಂದ ಸ್ವಾಗತಿಸಲಾಯಿತು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಸಂವಿಧಾನ ಪಿಠಿಕೆ ಪ್ರತಿಜ್ಞಾ ವಿಧಿಯನ್ನು ಎಂ.ಎಂ. ಮೆಗಲಮನಿ ನಡೆಸಿಕೊಟ್ಟರು. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ವಿಜಯಲಕ್ಷ್ಮೀ ಇಂಗಳಗಿ, ಗದಗ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ. ನಡುವಿನಮನಿ, ಎಚ್. ಆರ್. ಸಕ್ರಿ, ಪ.ಪಂ ಸದಸ್ಯ ಕೆ.ಎಲ್. ಕರಿಗೌಡರ, ಬಸವರಾಜ ಹಾರೋಗೇರಿ, ಎಸ್.ಸಿ. ಬಡ್ನಿ, ಡಿ.ಎಂ. ನಿಂಗಪ್ಪನವರ, ರಮೇಶ ಮ್ಯಾಗೇರಿ, ಮಂಜುಳಾದೇವಿ ಹಕ್ಕುಂಡಿ, ಡಿ.ಎಸ್. ಗುಡಿ, ಪ.ಪಂ ಮುಖ್ಯಾಧಿಕಾರಿ ಮಂಜುನಾಥ ಗುಳೆದ, ಶಾಲಾ ವಿದ್ಯಾರ್ಥಿಗಳು ಹಾಗೂ ಶಿಕ್ಷಕ ವೃಂದದವರು ಇದ್ದರು.

### ಜೆಡಿಎಸ್ ರಾಜ್ಯ ವಕ್ತಾರ ವೆಂಕನಗೌಡ ಗೋವಿಂದಗೌಡ್ರ ನೇತೃತ್ವದಲ್ಲಿ ಪ್ರತಿಭಟನೆ

# ರೈತರ ಬೇಡಿಕೆಗಳನ್ನು ಸರಕಾರ ಈಡೇರಿಸಲಿ

**■ವಿಜಯಸಾಕ್ಷಿ ಸುದ್ದಿ, ಗದಗ**

ಬರದಿಂದಾಗಿ ರೈತರು ಸಂಕಷ್ಟದಲ್ಲಿದ್ದು, ರಾಜ್ಯ ಸರಕಾರ ಪ್ರಸಕ್ತ ಬಜೆಟ್‌ನಲ್ಲಿ ರೈತರ ಸಂಪೂರ್ಣ ಸಾಲ ಮನ್ನಾ ಮಾಡುವುದೂ ಸೇರಿದಂತೆ ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಜೆಡಿಎಸ್ ಕಾರ್ಯಕರ್ತರು, ಪಕ್ಷದ ರಾಜ್ಯ ವಕ್ತಾರ ವೆಂಕನಗೌಡ ಗೋವಿಂದಗೌಡ್ರ ನೇತೃತ್ವದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಇಲ್ಲಿನ ಗದಗ–ಬೆಟಗೇರಿ ನಗರಸಭೆ ಆವರಣದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮೆರವಣಿಗೆ ಆರಂಭಿಸಿದ ಜೆಡಿಎಸ್ ಕಾರ್ಯಕರ್ತರು, ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಜಿಲ್ಲಾಡಳಿತ ಭವನ ಎದುರು ಧರಣಿ ನಡೆಸಿದರು. ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಮುದುಕಮ್ಮನವರ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜೆಡಿಎಸ್ ರಾಜ್ಯ ವಕ್ತಾರ ವೆಂಕನಗೌಡ ಗೋವಿಂದಗೌಡ್ರ, ರಾಜ್ಯದಲ್ಲಿ ಬರ ಆವರಿಸಿದ್ದು, ರೈತರು ಸಂಕಷ್ಟದಲ್ಲಿದ್ದಾರೆ. ರಾಜ್ಯ ಸರಕಾರ ತಕ್ಷಣ ಬರ ಪರಿಹಾರ ಒದಗಿಸುವ ಜೊತೆಗೆ ಸಣ್ಣ ಮತ್ತು ಮಧ್ಯಮ ವರ್ಗದ ರೈತರ ಸಂಪೂರ್ಣ ಸಾಲ ಮನ್ನಾ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಪ್ರಫುಲ್ ಪುಣೇಕರ, ಬಸವರಾಜ ಅಪ್ಪಣ್ಣವರ, ದೇವಪ್ಪ ಮಲ್ಲಸಮುದ್ರ, ಡಾ.ಯಲ್ಲಪ್ಪ ಹೂಗಾರ, ಮರಿಯಪ್ಪ ಬಳ್ಳಾರಿ, ಪರಶುರಾಮ ಹಿರೇಮನಿ, ಈರಣ್ಣ ಬಾಳಿಕಾಯಿ, ಜಿ.ಕೆ. ಕೊಳ್ಳಿಮಠ, ತಿಪ್ಪಣ್ಣ ಹುಡೇದ, ಅಮರೇಶ ಅಂಗಡಿ, ಕುಮಾರ ಜಿಗಳೂರ, ದಾದಾಪೀರ ಕಲೇಗಾರ, ರಾಜೇಸಾಬ ಬಾಗೇವಾಡಿ, ಕುಮಾರ ಈಳಿಗೇರ ಮುಂತಾದವರು ಉಪಸ್ಥಿತರಿದ್ದರು.



> ದೇಶದ ಬೆನ್ನೆಲುಬಾದ ರೈತನ ಕಷ್ಟಕ್ಕೆ ಸರಕಾರ ಸ್ಪಂದಿಸುತ್ತಿಲ್ಲ. ರೈತರ ಸಾಲ ಮನ್ನಾ ಜೊತೆಗೆ ಕೃಷಿ ಯಂತ್ರೋಪಕರಣಗಳ ಮೇಲಿನ ಸಾಲದ ಅವಧಿಯನ್ನು ವಿಸ್ತರಿಸಬೇಕು, ಕೃಷಿ ಪಂಪ್‌ಸೆಟ್‌ಗಳಿಗೆ 12 ತಾಸು ನಿರಂತರ ವಿದ್ಯುತ್ ನೀಡಬೇಕು, ಹಾಲಿನ ಪ್ರೋತ್ಸಾಹಧನವನ್ನು ಈ ಮೊದಲಿನಂತೆ ವಿತರಣೆಗೆ ಕ್ರಮ ಕೈಗೊಳ್ಳಬೇಕು, ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಂಬಲ ಬೆಲೆ ನಿಗದಿ ಮಾಡಬೇಕು ಎಂದು ಒತ್ತಾಯಿಸಿದರು.

## ಶಾಂತಗಿರಿ ಗ್ರಾ.ಪಂ ಚುನಾವಣೆಯಲ್ಲಿ ಅರಳಿದ ಕಮಲ



**■ವಿಜಯಸಾಕ್ಷಿ ಸುದ್ದಿ, ರೋಣ**

ಗಜೇಂದ್ರಗಡ ತಾಲೂಕಿನ ಶಾಂತಗೀರಿ ಗ್ರಾ.ಪಂ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಜಯ ಗಳಿಸಿದ್ದಾರೆ.

ರೋಣ ತಾಲೂಕಿನ ಗಡಿಯನ್ನು ಹಂಚಿಕೊಂಡಿರುವ ಶಾಂತಗೀರಿ ಗ್ರಾ.ಪಂ 20 ಸದಸ್ಯರ ಬಲವನ್ನು ಹೊಂದಿದ್ದು, ಈ ಹಿಂದೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳತ್ತ ವಾಲಿತ್ತು. ಹಿಂದಿನ ಅಧ್ಯಕ್ಷ, ಉಪಾಧ್ಯಕ್ಷರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ತೆರವಾದ ಸ್ಥಾನಗಳಿಗೆ ಮಂಗಳವಾರ ಚುನಾವಣೆ ಘೋಷಣೆ ಮಾಡಲಾಗಿತ್ತು.

ಕೂತಹಲ ಮೂಡಿಸಿದ್ದ ಶಾಂತಗೀರಿ ಗ್ರಾ.ಪಂ ಅಧ್ಯಕ್ಷ–ಉಪಾಧ್ಯಕ್ಷ ಚುನಾವಣೆಯು ಕೆಲವರಿಗೆ ಪ್ರತಿಷ್ಠೆಯ ಕಣವಾಗಿ ಮಾರ್ಪಟ್ಟಿತ್ತು. ತೆರವಾದ ಸ್ಥಾನಗಳಿಗೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಭೀಮಪ್ಪ ಲಮಾಣಿ ನಾಮಪತ್ರವನ್ನು ಸಲ್ಲಿಸಿದ್ದರು. ಪ್ರತಿಸ್ಪರ್ಧಿಯಾಗಿ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಲಕ್ಷ್ಮೀಭಾಯಿ ಲಮಾಣಿ ನಾಮಪತ್ರ ಸಲ್ಲಿಕೆ ಮಾಡಿದ್ದರು. ಇವರಿಬ್ಬರಿಗೂ ತಲಾ 10 ಸದಸ್ಯರು ಮತದಾನ ಮಾಡಿದ್ದರು. ಹೀಗಾಗಿ ಚುನಾವಣಾಧಿಕಾರಿಗಳು ಚೀಟಿ ಎತ್ತುವ ಕಾರ್ಯಕ್ಕೆ ಮುಂದಾದರು.

ಈ ಪ್ರಕ್ರಿಯೆಯಲ್ಲಿ ಬಿಜೆಪಿ ಅಭ್ಯರ್ಥಿ ಲಕ್ಷ್ಮೀಭಾಯಿ ಲಮಾಣಿಯವರು ಜಯಗಳಿಸಿದ್ದಾರೆ ಎಂದು ಘೋಷಿಸಲಾಯಿತು. ಇನ್ನು ಉಪಾಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಅಭ್ಯರ್ಥಿ ಅನುಸೂಯಾ ಶಿಗ್ಲಿ 11 ಮತಗಳನ್ನು ಪಡೆದರೆ, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಜಯಶ್ರೀ ಜಾಲಿಹಾಳ 9 ಮತಗಳನ್ನು ಪಡೆಯುವ ಮೂಲಕ ಪರಾಭವಗೊಂಡರು. ಒಟ್ಟಿನಲ್ಲಿ ಈ ಫಲಿತಾಂಶ ಸ್ಥಳೀಯ ಕಾಂಗ್ರೆಸ್ ಮುಖಂಡರಲ್ಲಿ ಬೇಸರ ಮೂಡಿಸಿದ್ದರೆ, ಬಿಜೆಪಿ ಮುಖಂಡರ ಹಾಗೂ ಕಾರ್ಯಕರ್ತರ ವಿಜಯೋತ್ಸವಕ್ಕೆ ಕಾರಣವಾಗಿತ್ತು. ತಾ.ಪಂ ಇಒ ಡಿ.ಮೋಹನ್ ಚುನಾವಣಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದರು.

### ಬಂಜಾರ ಸಮಾಜದ ಸಭೆಯಲ್ಲಿ ಶಾಸಕ ಡಾ. ಚಂದ್ರು ಲಮಾಣಿ

# ಸಂತ ಸೇವಾಲಾಲ್ ಜಯಂತಿ ಯಶಸ್ವಿಗೊಳಿಸಿ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಬಂಜಾರ ಸಮುದಾಯದ ಆರಾಧ್ಯ ದೈವ ಸಂತ ಶ್ರೀಸೇವಾಲಾಲ್‌ರವರ 285ನೇ ಜಯಂತಿ ಆಚರಣೆಯನ್ನು ಫೆ.29ರ ಗುರುವಾರ ಸೋಮೇಶ್ವರ ದೇವಸ್ಥಾನದ ತೇರಿನ ಮನೆ ಆವರಣದಲ್ಲಿ ನಡೆಸಲು ಸಮಾಜ ತೀರ್ಮಾನಿಸಿದೆ ಎಂದು ಶಾಸಕ ಡಾ.ಚಂದ್ರು ಲಮಾಣಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬಂಜಾರ ಸಮಾಜ ಬಾಂಧವರನ್ನೊಳಗೊಂಡ ಸಭೆಯಲ್ಲಿ ಮಾಹಿತಿ ನೀಡಿ, ಫೆ.29ರಂದು ಬೆಳಿಗ್ಗೆ 10 ಗಂಟೆಗೆ ಪಟ್ಟಣದ ಪಂಪವೃತ್ತದಿಂದ ಪೂರ್ಣಕುಂಭ, ಕಲಾತಂಡದೊಂದಿಗೆ ಪ್ರಮುಖ ಮಾರ್ಗಗಳಲ್ಲಿ ಸೇವಾಲಾಲ್ ಮಹಾರಾಜರ ಭಾವಚಿತ್ರದ ಮೆರವಣಿಗೆ ಜರುಗಲಿದೆ.

ಸಕಲ ವಾದ್ಯ ವೈಭವಗಳೊಂದಿಗೆ ಶಿರಹಟ್ಟಿ/ಲಕ್ಷ್ಮೇಶ್ವರ ತಾಲೂಕಿನ ಸಾವಿರಾರು ಸಮಾಜ ಬಾಂಧವರು ಸಂಪ್ರದಾಯಬದ್ಧವಾದ ಉಡುಪುಗಳನ್ನು ಧರಿಸಿ ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಮೆರವಣಿಗೆ ಬಳಿಕ ಶ್ರೀ ಸೋಮೇಶ್ವರ ದೇವಸ್ಥಾನದ ತೇರಿನ ಮನೆ ಆವರಣದಲ್ಲಿ ವಿವಿಧ ಮಠಾಧೀಶರ ಸಾನ್ನಿಧ್ಯ, ರಾಜಕಾರಣಿಗಳು, ಗಣ್ಯಮಾನ್ಯರು, ಜನಪ್ರತಿನಿಧಿಗಳು, ಹಿರಿಯರ ಸಮ್ಮುಖದಲ್ಲಿ ಸಭಾ ಕಾರ್ಯಕ್ರಮ ಜರುಗಲಿದೆ. ಅದೇ ದಿನ ಪಟ್ಟಣದ ಪ್ರವಾಸಿ ಮಂದಿರದ ಹಿಂದುಗಡೆಯ ನಿವೇಶನದಲ್ಲಿ ಬಂಜಾರ ಸಮುದಾಯ ಭವನಕ್ಕೆ ಭೂಮಿಪೂಜೆ ನೆರವೇರಿಸಲು ತೀರ್ಮಾನಿಸಲಾಗಿದೆ.

ಸೇವಾಲಾಲ್ ಜಯಂತಿ ಸಮಾರಂಭಕ್ಕೆ ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ತಾಲೂಕಿನ ಎಲ್ಲ ತಾಂಡಗಳಿಂದ ಸಾವಿರಾರು ಸಂಖ್ಯೆಯಲ್ಲಿ ಸಮುದಾಯದ ಬಂಧುಗಳು ಭಾಗವಹಿಸಿ, ಸಂತ ಸೇವಲಾಲ್ ಜಯಂತಿ ಕಾರ್ಯಕ್ರಮ ಯಶಸ್ಸಿಗೆ ಎಲ್ಲರೂ ಕೈಜೋಡಿಸುವಂತೆ ಮನವಿ ಮಾಡಿದರು.

ಈ ವೇಳೆ ದೀಪಕ ಲಮಾಣಿ, ಗುರಪ್ಪ ಲಮಾಣಿ, ಶಿವಣ್ಣ ಲಮಾಣಿ, ಮಾನಪ್ಪ ನಾಯಕ, ದೇವಪ್ಪ ಲಮಾಣಿ, ಜಾನು ಲಮಾಣಿ, ಶಿವಣ್ಣ ಲಮಾಣಿ, ಶೇಖಪ್ಪ ಲಮಾಣಿ, ಸೋಮು ಲಮಾಣಿ, ಈರಣ್ಣ ಚವ್ಹಾಣ, ಥಾವರಪ್ಪ ಲಮಾಣಿ, ಪರಮೇಶ ಲಮಾಣಿ, ಲಕ್ಷ್ಮಣ ಲಮಾಣಿ, ಮಹೇಶ ಲಮಾಣಿ, ದುಂಡಪ್ಪ ಲಮಾಣಿ, ಈಶಪ್ಪ ಲಮಾಣಿ, ಸೋಮರೆಡ್ಡಿ ಲಮಾಣಿ, ಗಣೇಶ ಲಮಾಣಿ, ಪುಂಡಲೀಕ ಲಮಾಣಿ ಸೇರಿ ಹಲವರಿದ್ದರು.



## ಸಂಪಾದಕೀಯ

# ಬಿಜೆಪಿಗೆ ನೆನಪಾದ ಕೇಸರಿ ಶಾಲು

ರಾಜ್ಯ ವಿಧಾನ ಮಂಡಲ ಅಧಿವೇಶನ ಆರಂಭವಾಗಿದೆ. ರಾಜ್ಯಪಾಲರು ಉಭಯ ಸದನಗಳನ್ನ ಉದ್ದೇಶಿಸಿ ಮಾತನಾಡಿದ್ದಾರೆ. ಇದೇ 16 ರಂದು ಸಿದ್ದರಾಮಯ್ಯ ರಾಜ್ಯ ಬಜೆಟ್ ಮಂಡನೆಗೆ ತಯಾರಾಗಿದ್ದಾರೆ.

ಅಧಿವೇಶನ ಆರಂಭದ ರಾಜ್ಯಪಾಲರ ಭಾಷಣ ಈಗ ಪ್ರತಿಪಕ್ಷಗಳ ಕಂಗಣ್ಣಿಗೆ ಗುರಿಯಾಗಿದೆ. ಕೇಂದ್ರ ಸರ್ಕಾರದ ಅನುದಾನ ತಾರತಮ್ಯವನ್ನು ಪ್ರಸ್ತಾಪಿಸಿ, ಕೇಂದ್ರದಿಂದ ಅನುದಾನ ತರುವ ಪ್ರಯತ್ನವನ್ನು ರಾಜ್ಯ ಸರಕಾರ ಮಾಡುತ್ತಿದೆ ಎಂದಿರುವುದು ಬಿಜೆಪಿ ಮುಖಂಡರ ಟೀಕೆಗೆ ಗುರಿಯಾಗಿದೆ.

ರಾಜ್ಯಪಾಲರನ್ನು ರಾಷ್ಟ್ರಪತಿ ನೇಮಿಸಿದರೂ, ರಾಜ್ಯ ಸರಕಾರ ಬರೆದುಕೊಟ್ಟಿದ್ದನ್ನೆ ರಾಜ್ಯಪಾಲರು ವಿಧಾನಸಭೆಯಲ್ಲಿ ಮಾತಾಡಬೇಕು. ಇದೇ ಪ್ರಜಾಪ್ರಭುತ್ವದ ವೈಶಿಷ್ಟ್ಯ. ಈ ಬಗ್ಗೆ ಸ್ಪಷ್ಟ ಅರಿವಿದ್ದರೂ ಇವತ್ತು ಕೆಲ ಬಿಜೆಪಿ ನಾಯಕರು ನೇರವಾಗಿ ರಾಜ್ಯಪಾಲರನ್ನೆ ಗುರಿಯಾಗಿಸಿ ಮಾತನಾಡಿದ್ದಾರೆ. ಸಂಸದೀಯ ವ್ಯವಹಾರಗಳ ಅರಿವಿರುವ ನಾಯಕರು ಮಾತ್ರ ರಾಜ್ಯ ಸರಕಾರ, ರಾಜ್ಯಪಾಲರ ಮೂಲಕ ಈ ರೀತಿ ಹೇಳಿಸಿರುವುದು ಸರಿಯಲ್ಲ ಎಂದಿದ್ದಾರೆ.

ವಿಷಯ ಇಷ್ಟೆ, ಬಿಜೆಪಿ ನಾಯಕರಿಗೆ ಇನ್ನೂ ಸಂಸದೀಯ ವ್ಯವಹಾರಗಳ ಬಗ್ಗೆ ಜ್ಞಾನದ ಕೊರತೆ ಕಾಡುತ್ತಿದೆ. ಜೊತೆಗೆ ಇವತ್ತು ಕೇಸರಿ ಶಾಲು ಸಹ ಸೇರಿಕೊಂಡಿದೆ.

ಬಿಜೆಪಿ ಶಾಸಕರೆಲ್ಲರೂ ಇವತ್ತು ಕೇಸರಿ ಶಾಲು ಧರಿಸಿಕೊಂಡು ಅಧಿವೇಶನಕ್ಕೆ ಹಾಜರಾಗಿದ್ದರು. ಆದರೆ ಯಾವ ಕಾರಣಕ್ಕಾಗಿ ಈ ವಸ್ತ್ರಸಹಿತೆ ಪಾಲಿಸಿದರು ಎನ್ನುವ ಬಗ್ಗೆ ಎಲ್ಲಿಯೂ ಸ್ಪಷ್ಟತೆ ಇರಲಿಲ್ಲ.

ಅಷ್ಟಕ್ಕೂ ಕೇಸರಿ ಶಾಲನ್ನು ನಿರ್ದಿಷ್ಟ ಕಾರಣ ಅಥವಾ ಸಂದರ್ಭದಲ್ಲಿ ಹಾಕಬೇಕು ಎನ್ನುವ ನಿಯಮವೇನಿಲ್ಲ. ಆದರೆ ಎಲ್ಲರೂ ಒಟ್ಟಾಗಿ ಹಾಕಿಕೊಂಡು ಬಂದಿರುವುದಕ್ಕೆ ಏನಾದರೂ ಕಾರಣ ಇರಲೇಬೇಕಲ್ಲವೇ?

ಬಿಜೆಪಿ ಅಧಿಕಾರದಲ್ಲಿದ್ದಾಗ ಶಾಸಕರು ಒಂದು ದಿನವೂ ಕೇಸರಿ ಶಾಲು ಧರಿಸಲಿಲ್ಲ. ಅಧಿಕಾರದಲ್ಲಿದ್ದಾಗ ಕೇಸರಿ ಶಾಲು ಮರೆತಿದ್ದ ಬಿಜೆಪಿಗರಿಗೆ ಈಗ ಏಕಾಏಕಿ ಯಾಕೆ ನೆನಪಾಗಿದೆ ಎನ್ನುವುದು ಯಕ್ಷ ಪ್ರಶ್ನೆಯಾಗಿದೆ. ಇದು ಕೇವಲ ಒಂದು ದಿನಕ್ಕೆ ಮಾತ್ರ ಸೀಮಿತವೋ, ಅಧಿವೇಶನದುದ್ದಕ್ಕೂ ಕೇಸರಿ ಶಾಲು ಹಾಕುತ್ತಾರಾ ಕಾದು ನೋಡೋಣ.

### ನಂಜನರಿಯದ ಸ್ನೇಹಜೀವಿ ಮಂಜುನಾಥ ಬಸಪ್ಪ ಅಬ್ಬಿಗೇರಿಯವರ ಪರಿಚಯ ಲೇಖನ

# 'ಕಿತ್ತೂರು ಕರ್ನಾಟಕ'ದ ಸಾರಥಿ



ಪತ್ರಿಕೆಯ ಒಡೆಯರು ಹಾಗೂ ಸಂಪಾದಕ ಮಂಜುನಾಥ ಬಸಪ್ಪ ಅಬ್ಬಿಗೇರಿ (ಅಬ್ಬಿಗೇರಿ ಮಂಜಣ್ಣ ಎಂದೇ ಜನಾನುರಾಗಿಯಾದವರು) ಕೃಷಿ ಉದ್ದಿಮೆಗಳೆರಡರಲ್ಲೂ ಹೆಸರಾಂತ ಅಬ್ಬಿಗೇರಿ ಮನೆತನದವರು. ಶ್ರಮಸಂಸ್ಕೃತಿ, ಸುಸಂಸ್ಕೃತ ನಡೆನುಡಿ, ಉದಾರ ಹೃದಯವಂತಿಕೆ, ವ್ಯವಹರಣ ಜಾಣ್ಮೆ, ಸಾಮಾಜಿಕ ಕಳಕಳಿ ಕುಟುಂಬದ ಬಳುವಳಿಗಳು. ತಂದೆ ಲಿಂ. ಬಸಪ್ಪನವರು 1912ರ ದಶಕದಲ್ಲಿಯೇ ಗದುಗಿನಲ್ಲಿ ಬೃಹತ್ ಆಯಿಲ್ ಮಿಲ್ಲನ್ನು ಸ್ಥಾಪಿಸಿ ಸಮಗ್ರ ಉತ್ತರ ಕರ್ನಾಟಕ ಹಾಗೂ ಮಹಾರಾಷ್ಟ್ರದ ಎಲ್ಲ ಮಾರುಕಟ್ಟೆಯಲ್ಲಿ ವ್ಯಾಪಾರ ಕುದುರಿಸಿದ ಖ್ಯಾತಿ ಇವರದಾಗಿದೆ.

ಕೃಷಿಯಾಧಾರಿತ ಸಮುದಾಯದಲ್ಲಿ ಅಂದು ಅತಿ ಅಚ್ಚರಿಯನ್ನುಂಟುಮಾಡುವ ಔದ್ಯಮಿಕ ಪರಿಸರವನ್ನು ಸೃಷ್ಟಿಸಿ ಸುದ್ದಿ ಮಾಡಿದವರು. ಇಪ್ಪತ್ತು ಎಕರೆ ಪ್ರದೇಶದಲ್ಲಿ ಕುಶಿಬಿ ಹಾಗೂ ಶೇಂಗಾ ಎಣ್ಣೆಯನ್ನು ಅಮೇರಿಕ ಹಾಗೂ ಜರ್ಮನ್ ಯಂತ್ರಗಳಿಂದ ದಿನಕ್ಕೆ ಇನ್ನೂರು ಟನ್ನುಗಳಷ್ಟು ಉತ್ಪಾದನೆ ಮಾಡಿ ಬೃಹತ್ ಉದ್ದಿಮೆದಾರರೆನಿಸಿಕೊಂಡವರು. ಸುಮಾರು 500 ಜನರಿಗೆ ಆ ಕಾಲದಲ್ಲಿ ತಮ್ಮ ಆಯಿಲ್ ಮಿಲ್‌ನಲ್ಲಿ ಉದ್ಯೋಗ ನೀಡಿದ್ದರಲ್ಲದೆ ಮಿಲ್‌ಗೆ ಬೇಕಾದ ಯಂತ್ರೋಪಕರಣ ತಯಾರಿ ಕೂಡಾ (ವರ್ಕ್‌ಶಾಪ್) ಹೊಂದಿದ್ದರೆಂಬುದು ಅವರ ಧೀಮಂತ ಶಕ್ತಿಗೆ ಸಾಕ್ಷಿಯಾಗಿದೆ.

ಮಿಲ್‌ಗೆ ಬೇಕಾದ ವಿದ್ಯುತ್‌ನ್ನು ಸ್ವಯಂ ಉತ್ಪಾದಿಸುತ್ತಿದ್ದುಜಗ ಅವರ ತಾಂತ್ರಿಕ ನೈಪುಣ್ಯತೆಗೆ ಸಾಕ್ಷಿ. ದೀಪಾವಳಿ ಹಬ್ಬದ ದಿನಗಳಲ್ಲಿ ಹತ್ತುಸಾವಿರ ವಿದ್ಯುದ್ದೀಪಗಳಿಂದ ಕಣ್ಣು ಕೋರೈಸುವಂತೆ ಬೆಳಕನ್ನು ಹರಡಿ ಉತ್ಸವದ ಸಡಗರವನ್ನು ಮೆರೆದವರು. ಸಾಹುಕಾರ ಅಬ್ಬಿಗೇರಿ ಬಸಪ್ಪನವರಿಗೆ ಸರ್ವಶ್ರೀ ತೋಟಪ್ಪಯ್ಯ ಶಾಸ್ತ್ರಿ ಹಿರೇಮಠ ವಾಸ್ತು ಮತ್ತು ಧಾರ್ಮಿಕ ಸಲಹೆಗಾರರಾಗಿ ಮಾರ್ಗದರ್ಶಕರಾಗಿದ್ದರು. ನಾರಾಯಣಾಚಾರ್ಯ ಕಲಘಟಗಿಯವರು, ಭೀಮರಾವ್ ಕುಲಕರ್ಣಿ ವ್ಯವಹಾರ ನಿರ್ದೇಶಕರಾಗಿದ್ದರು. ಶಿವಬಸಯ್ಯ ಅಡಿವೆಯ್ಯ ಹಿರೇಮಠ, ವಿಠಲ್‌ಸಾ ಬದಿ ಮುಂತಾದವರು ದಿ. ಬಸಪ್ಪನವರ ಜೀವನದ ಯಶಸ್ವಿ ಉದ್ದಿಮೆ ಹಾಗೂ ವ್ಯವಹಾರಿಕ ಜೀವನದಲ್ಲಿ ಮಹತ್ವದ ಪಾತ್ರವಹಿಸಿದ್ದರು.

ಮನೆತನದ ಉದ್ದಿಮೆ ಕೃಷಿಗಾರಿಕೆ ನಿಭಾಯಿಸುವುದಕ್ಕಾಗಿ ಮಂಜುನಾಥರು ಉಚ್ಚ ಶಿಕ್ಷಣದ ಗೊಡವೆಗೆ ಹೋಗಲಿಲ್ಲ. ಶ್ರಮವಹಿಸಿ ದುಡಿದು ಉದ್ದಿಮೆ-ಒಕ್ಕಲುತನಗಳೆರಡರಲ್ಲೂ ಸಾಕಷ್ಟು ಕೃಷಿ ಮಾಡಿದರು. 1983ರಲ್ಲಿ ರಾಜ್ಯಾದ್ಯಂತ ಮೆಕ್ಕೆ ಜೋಳ ಬಂಪರ್ ಬೆಳೆ ಬಂದಿತ್ತು. ಆದರೆ ಬೆಲೆ ಕುಸಿದಿತ್ತು. ಆ ಸಂದರ್ಭದಲ್ಲಿ ಮಂಜುನಾಥ ಅಬ್ಬಿಗೇರಿ ಅವರು ರಾಜ್ಯಾದ್ಯಂತ ಸಂಚರಿಸಿ ರೈತರಿಂದ ಮೆಕ್ಕೆ ಜೋಳಕ್ಕೆ ಸೂಕ್ತ ಬೆಲೆ ನೀಡಿ ಖರೀದಿಸಿ ಯೆಮನ್‌ಗೆ ರಫ್ತು ಮಾಡಿದ್ದು ದೊಡ್ಡ ಸಾಹಸವೇ ಸರಿ.

ಮಂಜುನಾಥ ಅಬ್ಬಿಗೇರಿಯವರಿಗೆ ವ್ಯವಹಾರ ಹಾಗೂ ಉದ್ಯಮಗಳ ಮಾರ್ಗದರ್ಶಕರಾಗಿದ್ದವರು ದಿ. ರಾಮಕೃಷ್ಣಸಾ ಬಸವಾ, ಸಂಗಣ್ಣ ವೀರಪ್ಪ ಗದಗ, ಎಸ್.ಎಸ್. ಹಿರೇಮಠ, ಕಾನೂನು ಸಲಹೆಗಾರರಾಗಿ ಉತ್ತಮ ಸ್ನೇಹಿತರಾಗಿದ್ದವರು ದಿ. ಜೆ.ವಿ, ಹಿರೇಮಠ ವಕೀಲರು ಹಾಗೂ ಬಾಲ್ಯ ಸ್ನೇಹಿತ ಪತ್ರಕರ್ತ ಎಂ.ಜಿ. ಕುಲಕರ್ಣಿ, ಧಾರ್ಮಿಕ ಸಲಹೆಗಾರರಾಗಿ ಮಂಜುನಾಥ ಅವರ ಭವಿಷ್ಯವನ್ನು ಕಾಲಕಾಲಕ್ಕೆ ರೂಪಿಸುತ್ತಾ ಬಂದವರು ದಿ. ಧೀರೇಂದ್ರಾಚಾರ್ಯ ಶ್ರೀನಿವಾಸಾಚಾರ್ಯ ಹೊಂಬಾಳಿ ಹಾಗೂ ಉಡುಪಿಯ ದಿ. ಅನಂತಯ್ಯ ಶಾಸ್ತ್ರಿಗಳು, ಗದುಗಿನ ಬಿ. ಚಾರ್ಲಿಸ್, ಸದ್ಯ ಗದುಗಿನವರೇ ಆದ ಚಂದ್ರಶೇಖರ ಮಂಜುನಾಥ ಭಟ್ ಅಡಿಗ, ವೇ. ಮೂ. ಎಸ್.ವಿ. ಕೂಗು ಇವರನ್ನು ಮಂಜುನಾಥ ಅಬ್ಬಿಗೇರಿಯವರು ಸದಾ ಸ್ಮರಿಸುತ್ತಾರೆ.

ಪ್ರತಿಯೊಬ್ಬ ಪುರುಷನ ಯಶಸ್ಸಿನ ಹಿಂದೆ ಪತ್ನಿಯ ಸಹನಶೀಲತೆ, ತ್ಯಾಗ, ಸಹಿಷ್ಣುತೆ ಇರುತ್ತದೆ. ಮಂಜುನಾಥ ಅವರ ಪತ್ನಿ ಸರ್ವಮಂಗಲಾದೇವಿ ಈ ಮಾತಿಗೆ ಹೊರತಾಗಿಲ್ಲ. ಇನ್ನರ್‌ವ್ಹೀಲ್ ಕ್ಲಬ್ ಗದಗ-ಬೆಟಗೇರಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಈಗಲೂ ಅನೇಕ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿದ್ದಾರೆ. ಪತ್ರಿಕೆಯ ಪ್ರಾರಂಭದ ದಿನಗಳಲ್ಲಿ ಪತ್ರಿಕೆಯ ಮುದ್ರಣ ಮುಗಿಸಿಕೊಂಡು ತಡರಾತ್ರಿ 3-4 ಗಂಟೆಯ ಸುಮಾರಿಗೆ ಮನೆಗೆ ಹೋದರೂ ತಮ್ಮ ನಿದ್ರೆ, ಆರೋಗ್ಯ ಲೆಕ್ಕಿಸದೇ 12 ವರ್ಷಗಳಿಂದ ನಿರಂತರ ಸಹಕಾರ ನೀಡಿ ತಮ್ಮ ಸಾಧನೆಗೆ ಧರ್ಮಪತ್ನಿ ಬೆನ್ನೆಲುಬಾಗಿ ನಿಂತಿದ್ದಾರೆ ಎನ್ನುತ್ತಾರೆ ಮಂಜುನಾಥ ಅಬ್ಬಿಗೇರಿಯವರು.

ಧಾರ್ಮಿಕ ಮನೋಭಾವದ ಮಂಜುನಾಥ ಅಬ್ಬಿಗೇರಿ ಎಲ್ಲ ಮಠಮಾನ್ಯಗಳೊಂದಿಗೆ ಏಕಪ್ರಕಾರವಾದ ನಿಷ್ಠೆಶ್ರದ್ಧೆಯಿಂದ ಸೇವೆಸಲ್ಲಿಸಿದ್ದಾರೆ. ಮಂಜುನಾಥರ 10ನೇ ವಯಸ್ಸಿನಲ್ಲಿ ಶ್ರೀ ರಂಭಾಪುರಿ ಜಗದ್ಗುರು ಪ್ರಸನ್ನರೇಣುಕ ವೀರಗಂಗಾಧರ ಭಗವತ್ಪಾದರು ಮುಕ್ತಿಮಂದಿರ ಇವರ ಆಶೀರ್ವಾದ, 13ನೇ ವಯಸ್ಸಿನಲ್ಲಿ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲೂಕಾ ಸಿದ್ಧನಕೊಳ್ಳದ ಸಿದ್ಧಯ್ಯನವರ ಆಶೀರ್ವಾದ, ಸನ್ 2004ರಲ್ಲಿ ಮಣಕವಾಡದ ಅಜ್ಜನವರ

(ಮೃತ್ಯುಂಜಯ ಅಪ್ಪಗಳ) ಆಶೀರ್ವಾದ ಪಡೆದಿದ್ದಾರೆ.

ಬಾಲ್ಯ ಸ್ನೇಹಿತ, ಹಿರಿಯ ಪತ್ರಕರ್ತ ಎಂ.ಜಿ. ಕುಲಕರ್ಣಿಯವರ ಜೊತೆಗೂಡಿ 6-11-2011 ರಂದು 'ಕಿತ್ತೂರ ಕರ್ನಾಟಕ' ದಿನಪತ್ರಿಕೆಯನ್ನು ಹುಟ್ಟುಹಾಕಿ ರಾಜ್ಯದ ಪ್ರಮುಖ ಪತ್ರಿಕೆಗಳಲ್ಲೊಂದಾಗಿಸುವ ಮಹತ್ವಾಕಾಂಕ್ಷೆಯೊಂದಿಗೆ ಕಾರ್ಯಾರಂಭ ಮಾಡಿದರು. ಗದುಗಿನ ತೋಂಟದಾರ್ಯ ಮಠದ ಜಗದ್ಗುರು ಲಿಂ. ಸಿದ್ಧಲಿಂಗ ಶ್ರೀಗಳು ಪತ್ರಿಕೆ ಮಾಡಲು ಬೆನ್ನುತಟ್ಟಿ ಪ್ರೋತ್ಸಾಹಿಸಿದ್ದಾರೆ. ಮಮತೆಯಿಂದ ಕೂಡಿದ ಅವರ ನಡೆನುಡಿ, ಉದ್ಯಮಶೀಲತೆಯಲ್ಲಿನ ಅವರ ಅನುಭವ, ಸಂಘರ್ಷ ಹೋರಾಟಗಳಲ್ಲಿ ಅವರು ಸಾಗಿಬಂದ ಪಥವನ್ನು ಗಮನಿಸಿದರೆ ಈ ಗುರಿಸಾಧನೆಯಲ್ಲಿ ಸಾಫಲ್ಯ ನಿಶ್ಚಿತ ಎಂಬುದು ಸುಸ್ಪಷ್ಟ.

ಪತ್ನಿ ಸರ್ವಮಂಗಲಾದೇವಿಯವರು ಬರಹಗಾರರಾಗಿದ್ದು, ಕಿತ್ತೂರ ಕರ್ನಾಟಕ ಕನ್ನಡ ದಿನಪತ್ರಿಕೆಯಲ್ಲಿ ಪ್ರತಿ ವಾರ ಪ್ರಕಟವಾಗುತ್ತಿದ್ದ 'ಸವಿ ಸವಿ ಅಡುಗೆ' ಎಂಬ ಶೀರ್ಷಿಕೆಯಡಿ ಬಗೆ-ಬಗೆಯ ಅಡುಗೆಯ ಬಗ್ಗೆ ಮಾಹಿತಿ ನೀಡುತ್ತಿದ್ದರು. ಆರೋಗ್ಯಕ್ಕೆ ಸಂಬಂಧಪಟ್ಟಂತೆ ಉಪಯುಕ್ತ ಮಾಹಿತಿಯನ್ನು ಲೇಖನಗಳ ಮೂಲಕ ಓದುಗರಿಗೆ ತಿಳಿಸುವುದಲ್ಲದೇ ಅನೇಕ ಕವನಗಳು, ಪ್ರಸ್ತುತ ವಿದ್ಯಮಾನಗಳ ಬಗೆಗಿನ ಲೇಖನಗಳು ಸೇರಿದಂತೆ ಮಹಿಳೆಯರಿಗೆ ಅನುಕೂಲವಾಗುವ ವಿಷಯಗಳನ್ನು ಬರೆದು ಓದುಗರನ್ನು ಆಕರ್ಷಿಸಿ ಹೆಚ್ಚಿನ ಸಂಖ್ಯೆಯಲ್ಲಿ ಪತ್ರಿಕೆಯು ಓದುಗರ ಕೈ ಸೇರುವಂತೆ ಮಾಡಿದರು. ಏಕೈಕ ಪುತ್ರ ಕೊಟ್ರೇಶ, ಸೊಸೆ ಕಾವ್ಯಾ, ಮೊಮ್ಮಕ್ಕಳಾದ ಕುನಾಲ ಹಾಗೂ ಖುಷಿ, ಏಕೈಕ ಪುತ್ರಿ ಸವಿತಾ, ಅಳಿಯ ಸತೀಶ ತಡಸದ ಹಾಗೂ ಇವರ ಏಕೈಕ ಪುತ್ರ ಸಾತ್ವಿಕ ಅವರನ್ನೊಳಗೊಂಡ ತುಂಬು ಸಂಸಾರಿಕ ಜೀವನ ಇವರದು.

**- ಮೌನೇಶ ಸಿ.ಬಡಿಗೇರ,** ಗದಗ.

# ಜಿಲ್ಲಾ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಪದಾಧಿಕಾರಿಗಳ ಆಯ್ಕೆ




**■ವಿಜಯಸಾಕ್ಷಿ ಸುದ್ದಿ, ಗದಗ**

ನೂತನವಾಗಿ ಕರ್ನಾಟಕ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಗದಗ ಘಟಕದ ಜಿಲ್ಲಾ, ತಾಲೂಕು ಪದಾಧಿಕಾರಿಗಳ ಆಯ್ಕೆ ನಡೆಯಿತು. ಗೌರವಾದಕ್ಷರಾಗಿ ವಾಸು ಕಲಕಾಂಬಿ, ಅಧ್ಯಕ್ಷರಾಗಿ ರಾಜು ಚವ್ಹಾಣ, ಕಾರ್ಯಾಧ್ಯಕ್ಷರಾಗಿ ಜಿ.ಎಸ್. ಪಾಟೀಲ್, ಪ್ರಧಾನ ಕಾರ್ಯದರ್ಶಿಯಾಗಿ ವಿ.ಟಿ. ಅಂಗಡಿ, ಖಜಾಂಚಿಗಳಾಗಿ ವಾಸು ಲಮಾಣಿ ಆಯ್ಕೆಯಾದರು.

ಆಯ್ಕೆಯಾದ ಪದಾಧಿಕಾರಿಗಳ ಅಧಿಕೃತ ಆದೇಶದೊಂದಿಗೆ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ಎ. ರಡ್ಡೇರರಿಗೆ ಗದಗ ಜಿಲ್ಲಾ ಮತ್ತು ತಾಲೂಕಾ ಪದಾಧಿಕಾರಿಗಳ ಸಮ್ಮುಖದಲ್ಲಿ ಮನವಿಯನ್ನು ಸಲ್ಲಿಸಲಾಯಿತು. ಜಿಲ್ಲಾಧ್ಯಕ್ಷ ರಾಜು ಚವ್ಹಾಣ ವಂದಿಸಿದರು.

# ಅಲಿ ಪಬ್ಲಿಕ್ ಶಾಲೆಯಲ್ಲಿ ಆರೋಗ್ಯ ತಪಾಸಣೆ





**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ನೂರಾನಿ ಚಾರಿಟೇಬಲ್ ಟ್ರಸ್ಟ್ ಮತ್ತು ಆರ್.ಎಂ.ಎಸ್. ಹುಲಕೋಟಿ ಸ್ವಯಂ ಸೇವಕ ವೈದ್ಯರ ತಂಡದ ಸಮನ್ವಯದೊಂದಿಗೆ ಅಲಿ ಪಬ್ಲಿಕ್ ಶಾಲೆಯಲ್ಲಿ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಳಲಾಗಿತ್ತು.

ಶಿಬಿರದಲ್ಲಿ ಕಣ್ಣಿನ ತಪಾಸಣೆ ಮತ್ತು ರಕ್ತದಲ್ಲಿನ ಸಕ್ಕರೆ ಪರೀಕ್ಷೆಯನ್ನು ಮಾಡಲಾಯಿತು. ಎಲ್.ಕೆ.ಜಿ.ಯಿಂದ ಹೈಸ್ಕೂಲ್ ವರೆಗಿನ ಒಟ್ಟು 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸೇರಿದಂತೆ ಶಿಕ್ಷಕರಿಗೂ ತಪಾಸಣೆ ನಡೆಸಲಾಯಿತು. ಹೆಚ್ಚಿನ ವೈದ್ಯಕೀಯ ನೆರವು ಅಗತ್ಯವಿರುವ ವಿದ್ಯಾರ್ಥಿಗಳಿಗೆ ತಜ್ಞರನ್ನು ಭೇಟಿ ಮಾಡುವಂತೆ ಸೂಚಿಸಲಾಯಿತು. ರೋಗಗಳ ಆರಂಭಿಕ ಪತ್ತೆ, ತಡೆಗಟ್ಟುವಿಕೆ, ಸಮೀಪದೃಷ್ಟಿಯ ಕುರಿತು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಯಿತು. ಶಾಲಾ ಆಡಳಿತ ಮಂಡಳಿಯು ಡಾ. ಸಂಕನಗೌಡರ ನಾಗನೂರ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಿದ್ದರು.

ಡಾ. ವೇಮನ್ ಸೌಕಾರ್ ಈ ಕಾರ್ಯಕ್ರಮವನ್ನು ಸಂಘಟಿಸಿ ಯಶಸ್ವಿಗೊಳಿಸಿದ್ದಕ್ಕಾಗಿ ಡಾ. ಪ್ಯಾರಾಲಿ ನೂರಾನಿ ಧನ್ಯವಾದ ತಿಳಿಸಿದರು. ಶಿಬಿರದಲ್ಲಿ ಶಾಲೆಯ ಅಧ್ಯಕ್ಷ ಖ್ವಾಜಾ ಅಮೀರ್ ಖಾಜಿ, ಕಾರ್ಯದರ್ಶಿ ಫಕ್ರುದ್ದೀನ್ ಆರ್. ದಂಡಿನ, ಉಪ ಕಾರ್ಯದರ್ಶಿ ಮೌಲಾನಾ ಝಕರಿಯಾ ಖಾಜಿ, ನಿಸಾರ್ ಅಹಮದ್ ಸಾಬ್, ಟ್ರಸ್ಟಿ ಕೋ ಆರ್ಡಿನೇಟರ್ ಮೊಹಮ್ಮದ್ ಸಾದಿಕ್ ಖಾಜಿ, ಮುಖ್ಯ ಶಿಕ್ಷಕಿ ಖಾಲಿದಾ ಸಬ್ರೀನ್ ಗುಳೇದಗುಡ್ಡ, ಎಚ್.ಎಂ. ಆಯೇಶಾ ಖಾಜಿ, ರೇಷ್ಮಾ ಮಸೂತಿ, ಜರೀನಾ ಲೋಡಿ, ಆರ್.ಎಂ.ಎಸ್. ಹುಲಕೋಟಿಯ ನೇತ್ರ ತಜ್ಞರಾದ ಅಮೀರ ಮತ್ತು ಆಯೇಶಾ ಇದ್ದರು.




**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಕೆಸಿಸಿ ಬ್ಯಾಂಕ್‌ನ ಮಾಜಿ ನಿರ್ದೇಶಕ, ಮಾಜಿ ಶಾಸಕ ಜಿ.ಎಂ. ಮಹಾಂತಶೆಟ್ಟರ ಅವರ ಪುತ್ರ ಸುನೀಲ ಮಹಾಂತಶೆಟ್ಟರ ಬಿಜೆಪಿ ಶಿರಹಟ್ಟಿ ಮಂಡಲ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಪಕ್ಷದ ಸಂಘಟನೆಗಾಗಿ ಜಿಲ್ಲಾಧ್ಯಕ್ಷ ರಾಜು ಕುರಡಗಿ ಇವರಿಗೆ ನೇಮಕಾದೇಶ ಮಾಡಿದರು.

### ಗೋ-ಸಾವಯವ ಕೃಷಿ ಜಾಗೃತಿ ಕಾರ್ಯಕ್ರಮದಲ್ಲಿ ನಂದಿವೇರಿಮಠದ ಶ್ರೀಗಳು

# ಗೋಮಾತೆಯಿಂದ ಆರೋಗ್ಯಪೂರ್ಣ ಸಮಾಜ




**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಭಾರತೀಯ ಧರ್ಮ, ಸಂಸ್ಕೃತಿ, ಪರಂಪರೆಯಲ್ಲಿ ಗೋಮಾತೆಗೆ ಪೂಜ್ಯನೀಯ ಸ್ಥಾನಮಾನವಿದ್ದು, ಭವಿಷ್ಯದ ದೃಷ್ಟಿಯಿಂದ ಗೋವುಗಳ ಸಂರಕ್ಷಣೆ-ಪೋಷಣೆ ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಕಪ್ಪತ್ತಗಿರಿ ನಂದಿವೇರಿಮಠದ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಹೇಳಿದರು.

ಅವರು ತಾಲೂಕಿನ ಮಾಡಳ್ಳಿ ಗ್ರಾಮದ ದಿ. ಗೊಂದೆಪ್ಪ ಚಿಂಚಲಿ ಅವರ ಜಾಗೆಯಲ್ಲಿ ಗ್ರಾಮೀಣ ಆರೋಗ್ಯ, ಗೋ-ಸಾವಯವ ಕೃಷಿ ಜಾಗೃತಿ ಹಾಗೂ ಕಾಮಧೇನು ಗೋಮಂದಿರ ಉದ್ಘಾಟನೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಗೋಮಾತೆ ಭೂಮಿತಾಯಿಗೆ ಸಮಾನಳು ಎಂತಲೂ, ಸಕಲ ದೇವತೆಗಳ ಆವಾಸ ಸ್ಥಾನ ಎಂಬ ನಂಬಿಕೆಯೂ ಇದೆ. ಕೃಷಿ ಮತ್ತು ಗೋಮಾತೆಗೂ ಅವಿನಾಭಾವ ಸಂಬಂಧವಿದೆ. ತಂತ್ರಜ್ಞಾನದ ಪ್ರಭಾವದಿಂದ ಗೋವುಗಳ ಸಂತತಿ ನಶಿಸುತ್ತಿದ್ದು ಗೋವು ಸಂತತಿ ಕಡಿಮೆಯಾದರೆ ಕೃಷಿ ಅವನತಿಯತ್ತ ಸಾಗಿ ದೇಶ ಸಂಕಷ್ಟದ ಪರಿಸ್ಥಿತಿ ಎದುರಿಸಬೇಕಾಗುತ್ತದೆ. ಕಾಮಧೇನು ಕಲ್ಪವೃಕ್ಷ ಎನ್ನುವಂತೆ ಕೃಷಿಗಷ್ಟೇ ಅಲ್ಲದೇ ಹಸುವಿನಿಂದ ನಿತ್ಯ ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ ಲಭಿಸುತ್ತದೆ ಅಷ್ಟೇ ಅಲ್ಲದೇ ಗೋ ಪೂಜೆಯ ಫಲ ಶ್ರೇಷ್ಠವಾಗಿರುತ್ತದೆ. ಅದರ ಸಗಣಿಯಿಂದ ಪಾಪ ಕಳೆವ ವಿಭೂತಿ ಸಿದ್ಧವಾಗುತ್ತದೆ. ಗಂಜಲವನ್ನು ಔಷಧಿ ತಯಾರಿಸಲು ಉಪಯೋಗಿಸುತ್ತಾರೆ.

ಗೋಮಾತೆಯನ್ನು ಪೂಜಿಸುವುದರಿಂದ ನಮ್ಮ ಪಾಪಕರ್ಮಗಳು ನಾಶವಾಗಿ, ಪುಣ್ಯ ಪ್ರಾಪ್ತಿಯಾಗುತ್ತದೆ. ಆದರೆ ಗೋಹತ್ಯೆಯಿಂದ ಮಹಾಪಾಪ ಅಂಟಿಕೊಳ್ಳುತ್ತದೆ. ಒಟ್ಟಿನಲ್ಲಿ ಆರೋಗ್ಯಪೂರ್ಣ ಸಮಾಜ ನಿರ್ಮಾಣಕ್ಕೆ ಕಾಮಧೇನುವಿನ ಪಾತ್ರ ಮಹತ್ವದ್ದಾಗಿದೆ ಎಂದರು.

ಸಾವಯವ ಕೃಷಿ ವಿಜ್ಞಾನಿ ಸಿ.ಆರ್. ಪಾಟೀಲ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ತಂತ್ರಜ್ಞಾನದ ನಡುವೆಯೂ ರಾಸಾಯನಿಕ ಗೊಬ್ಬರ-ಕ್ರಿಮಿನಾಶಕದ ಬದಲಾಗಿ ಸಾವಯವ ಕೃಷಿಯತ್ತ ರೈತರು ಚಿತ್ತ ಹರಿಸಬೇಕು ಎಂದರು. ಪತಂಜಲಿ ಯೋಗ ನಿಸರ್ಗ ಚಿಕಿತ್ಸಾ ಕೇಂದ್ರದ ಮುಖ್ಯಸ್ಥ ವೀರೇಶ ಗುರೂಜಿ ಯೋಗ ಮತ್ತು ನಿಸರ್ಗ ಚಿಕಿತ್ಸೆಯಿಂದ ರೋಗಮುಕ್ತರಾಗುವ ಬಗ್ಗೆ ಮಾತನಾಡಿದರು. ಹುಲಕೋಟಿ ಕೆವಿಕೆಯ ನಾರಾಯಣ ಬಂಡಿ, ಕೃಷಿ ಉಪನಿರ್ದೇಶಕ ರೇವಣಪ್ಪ ಮನಗೂಳಿ, ಸಾವಯವ ಕೃಷಿಕರಾದ ಮಲ್ಲೇಶಪ್ಪ ಬಿಸೆರೊಟ್ಟಿ, ದೇವರಡ್ಡಿ ಅಗಸನಕೊಪ್ಪ, ಕೃಷಿ ಪ್ರಶಸ್ತಿ ಪುರಸ್ಕೃತ ಡಾ.ಬಸವರಾಜ ನಾವಿ, ಯತ್ನಳ್ಳಿಯ ಬಿ.ಎಸ್. ಪಾಟೀಲ, ಪಂಚಗವ್ಯ ಚಿಕಿತ್ಸಕಿ ಶಿವಲೀಲಾ ಹೊಸಮನಿ, ರುದ್ರಗೌಡ ಲಿಂಗನಗೌಡ್ರ, ರವಿ ಹಡಪದ, ಜಿ.ವಿ. ಪಾಟೀಲ, ಹುಲಿಗೆಪ್ಪ ಕೆರಣ್ಣವರ, ಬಸವರಾಜ ಸಂಗಪ್ಪಶೆಟ್ಟರ ಸೇರಿ ಸುತ್ತಮುತ್ತಲಿನ ಗ್ರಾಮದ ರೈತರು ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ಗೋ ಆಧಾರಿತ ಸಾವಯವ ಕೃಷಿ, ಔಷಧಿ ರಹಿತ ನಿಸರ್ಗ ಚಿಕಿತ್ಸೆ ಹಾಗೂ ಮನೆಮದ್ದುಗಳು, ಸಾವಯವ ಕೃಷಿ ಉಪಕರಣಗಳು, ಸಾವಯವ ಗೊಬ್ಬರ ಇವುಗಳ ಕುರಿತು ಚಿಂತನಗೋಷ್ಠಿ, ಗೋ ಉತ್ಪನ್ನಗಳ ತಯಾರಿಕೆಯ ಪ್ರಾತ್ಯಕ್ಷಿಕೆ ನಡೆಯಿತು. ಉಚಿತ ಗೋಕೃಪಾಮೃತ ವಿತರಣೆ ಮತ್ತು ಸಂಜೆ ಅಗ್ನಿಹೋತ್ರ ಕಾರ್ಯಕ್ರಮ ನಡೆಯಿತು. ಜಿಲ್ಲಾ ಶ್ರೇಷ್ಠ ಕೃಷಿಕ ಪುರಸ್ಕೃತ ಹನಮಂತಪ್ಪ ಚಿಂಚಲಿ, ಪರಪ್ಪ ಕಣವಿ ನಿರ್ವಹಿಸಿದರು.

# ಶಿಶುನಾಳ ಶರೀಫ ಶಿವಯೋಗಿಗಳ ಪುರಾಣ ಪ್ರವಚನ

**■ವಿಜಯಸಾಕ್ಷಿ ಸುದ್ದಿ, ಗದಗ**

ಪುರಾಣ-ಪ್ರವಚನಗಳಿಂದ ಮನುಷ್ಯನ ಬದುಕು ಮತ್ತು ಮನಸ್ಸು ಪರಿವರ್ತನೆಯಾಗುತ್ತದೆ ಎಂದು ಶಿಕ್ಷಕ ಆರ್.ವಿ. ಗೊಂಡಬಾಳ ಹೇಳಿದರು.

ಅವರು ತಾಲೂಕಿನ ಚಿಕ್ಕಹಂದಿಗೋಳ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ಹಾಗೂ ಭದ್ರಕಾಳಮ್ಮನ ಜಾತ್ರಾ ಮಹೋತ್ಸವದ ಅಂಗವಾಗಿ ಕನ್ನಡದ ಕಬೀರ ಸಂತ ಶಿಶುನಾಳ ಶ್ರೀ ಶರೀಫ ಶಿವಯೋಗಿಗಳ ಮೂರನೇ ದಿನದ ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಮೂರನೇ ದಿನದ ಪ್ರವಚನದಲ್ಲಿ ಶ್ರೀ ಶರೀಫರ ತೊಟ್ಟಿಲು ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ದೇವಸ್ಥಾನ ಕಮೀಟಿ ಅಧ್ಯಕ್ಷ ನಾಗಪ್ಪ ವಿ.ಕಿತ್ತೂರ, ಸಿದ್ದರಾಮಯ್ಯ ಕಾಶಿಮಠ, ವಿರುಪಾಕ್ಷಯ್ಯ ತಾಳಿಕೋಟಿಮಠ, ತುಳಸಪ್ಪ ರೋಣದ, ಯುವಕರಾದ ದಾದಾಪೀರ್ ಅಣ್ಣಿಗೇರಿ ಸೇರಿದಂತೆ ಹಿರಿಯರು, ಗ್ರಾಮಸ್ಥರು ಉಪಸ್ಥಿತರಿದ್ದರು.

# 'ಸಾವಿತ್ರಿಬಾಯಿ ಫುಲೆ' ಪ್ರಶಸ್ತಿಗೆ ಭಾಜನ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**



ಲಕ್ಷ್ಮೇಶ್ವರ ತಾಲೂಕಿನ ಸುವರ್ಣಗಿರಿ ತಾಂಡಾದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಗೀತಾ ಗಜಾಕೋಶ 'ಸಾವಿತ್ರಿಬಾಯಿ ಫುಲೆ' ಪ್ರಶಸ್ತಿಗೆ ಭಾಜನರಾಗಿದ್ದಾರೆ.

# ಪ್ರಾಥಮಿಕ ಶಾಲಾ ಶಿಕ್ಷಕರ ಪತ್ತಿನ ಸಹಕಾರ ಸಂಘದ ಚುನಾವಣೆ



**■ವಿಜಯಸಾಕ್ಷಿ ಸುದ್ದಿ, ಗದಗ**

ಅಡವಿಸೋಮಾಪೂರ ವಲಯದ ಪ್ರಾಥಮಿಕ ಶಾಲಾ ಶಿಕ್ಷಕ, ಶಿಕ್ಷಕಿಯರ ಪತ್ತಿನ ಸಹಕಾರ ಸಂಘ ನಿಯಮಿತದ ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆಯಲ್ಲಿ ಬಿ.ಎಚ್. ಹಳ್ಳಿಕೇರಿ ವಿರುದ್ಧ ಅಧ್ಯಕ್ಷರಾಗಿ ಎಸ್.ಪಿ. ಕೊಪ್ಪದ, ವಿ.ಎಸ್. ಗುಜಮಾಗಡಿ ವಿರುದ್ಧ ಉಪಾಧ್ಯಕ್ಷರಾಗಿ ಜೆ.ಎನ್. ಏಳುಕೋಟಿ ಇವರು ಜಯಶಾಲಿಯಾಗಿದ್ದಾರೆ.

ಚುನಾಯಿತ ಎಲ್ಲ ಸದಸ್ಯರಿಗೆ ಸಂಘದ ನಿರ್ದೇಶಕ ಡಿ.ಎಸ್. ತಳವಾರ, ವೀರೇಶ ವಾಲ್ಮೀಕಿ, ಎನ್‌ಪಿಎಸ್ ನೌಕರರ ಸಂಘದ ಅಧ್ಯಕ್ಷ ಎಸ್.ಎಚ್. ಪೂಜಾರ, ಮಲ್ಲೇಶ ಡಿ.ಎಚ್, ಎಂ.ವಿ. ಬಸರಿಕಟ್ಟಿ, ಸುರೇಶ ದೊಡ್ಡಮನೆ, ಪಿ.ಎಂ. ಕೊರವರ, ಎಂ.ಬಿ. ಕಣವಿ, ಎಚ್.ಡಿ. ಕುರಿ, ಸಿದ್ದಪ್ಪ ಸೊಂಟಿ, ಎಂ.ವೈ. ಮಲಕಶೆಟ್ಟಿ, ಎಸ್.ಎಂ. ಭಜಂತ್ರಿ, ಆರ್.ಜಿ. ತೆಗ್ಗಿನಮನಿ, ಎಸ್.ಎಸ್. ಹುಬ್ಬಳ್ಳಿ, ಐ.ಎಚ್. ಹಳ್ಯಾಳ, ಎಚ್.ವೈ. ಜೇವರ್ಗಿ, ಎಸ್.ಪಿ. ಕುರಿ, ಕೆ.ಎಸ್. ಪಿಳ್ಳೈ, ಎಂ.ಪಿ. ಹೊನ್ನಾಪೂರ, ಎಸ್.ಬಿ. ಅಬ್ಬಿಗೇರಿ, ವೈ.ಎಫ್. ನಾಯಕರ, ಎಸ್.ಜಿ. ಹಳ್ಳಿಕೇರಿ, ಬಿ.ಡಿ. ಬಡೆಖಾನವರ, ಜೆ.ಜೆ. ಹಿರೇಹಾಳ, ಡಿ.ಟಿ. ಮೇರವಾಡೆ, ಎಸ್.ಜಿ. ಅಮ್ಮಿನಭಾವಿ, ಬಿ.ವಿ. ಜಾಲಿಹಾಳ, ಟಿ.ಮಮತಾ, ಶೈಲಜಾ ಮಟ್ಟಿ, ಕೆಎಚ್‌ಎಂಬಿ ಬಾರಾಟಕ್ಕೆ, ಡಿ.ಎಚ್. ಶೇಷಗಿರಿ, ಜಿ.ಬಿ. ಕಂಕರಿ, ಪಿ.ಈರಪ್ಪ, ಟಿ. ಉದಯಕುಮಾರ, ಜಯಕುಮಾರ ಉಮಚಗಿ, ಚೌಧರಿ, ಪ್ರವೀಣ ಮಡಿವಾಳರ, ಎಸ್.ಎಸ್. ಅರಹುಣಸಿ, ಎಸ್.ಜೆ. ಸಗರದ, ಎಸ್.ವೈ. ಅರ್ಕಸಾಲಿ, ವೈ.ಎಂ. ಕಟ್ಟಿ, ಮಹಾದೇವ ಹುಗಾರ, ನವಲಗುಂದ ಹಾಗೂ ಅಡವಿಸೋಮಾಪೂರ ವಲಯದ ಎಲ್ಲ ಸದಸ್ಯರು ಅಭಿನಂದಿಸಿದರು.

# ಆಶ್ರಯ ನಿವೇಶನ ಹಂಚಿಕೆಗೆ ಮುಗಿಯದ ಗ್ರಹಣ

▶▶ಮೊದಲನೇ ಪುಟದಿಂದ

ಆದರೆ 10 ವರ್ಷದ ಹಿಂದೆ 438 ಫಲಾನುಭವಿಗಳಿಗೆ ಹಕ್ಕು ಪತ್ರ ನೀಡಿದ್ದರೂ ಆ ನಿವೇಶನ ಅಭಿವೃದ್ಧಿಯೂ ಆಗಿಲ್ಲ ಮತ್ತು ಫಲಾನುಭವಿಗಳಿಗೆ ನಿವೇಶನವನ್ನೂ ಗುರುತಿಸಿ ಕೊಟ್ಟಿಲ್ಲ. ಉಳಿದ ಸಾವಿರಾರು ಫಲಾನುಭವಿಳಿಗೆ ಇಬ್ಬರು ಶಾಸಕರು ಪೂರ್ಣಾವಧಿ ಅಧಿಕಾರ ನಡೆಸಿದರೂ ಬಡವರಿಗೆ ನಿವೇಶನ ಹಂಚಲಾಗದೇ ಅಧಿಕಾರ ಮುಗಿಸಿದರು.

ಈಗಿನ ಆಶ್ರಯ ಕಮಿಟಿ ಅಧ್ಯಕ್ಷರು/ಶಾಸಕ ಡಾ. ಚಂದ್ರು ಲಮಾಣಿ ಈಗಾಗಲೇ ನಿಗಮಕ್ಕೆ ಸಲ್ಲಿಕೆಯಾದ 1153 ಫಲಾನುಭವಿಗಳ ಪಟ್ಟಿಯಲ್ಲಿಯೂ ಅರ್ಹರಿಗೆ ಅನ್ಯಾಯವಾಗಿದೆ ಎಂದು ರಾಜೀವ ಗಾಂಧಿ ವಸತಿ ನಿಗಮಕ್ಕೆ ಪತ್ರ ಬರೆದು, ಸಲ್ಲಿಕೆಯಾದ ಪಟ್ಟಿ ತಡೆಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಹೀಗೆ ಬದಲಾದ ಶಾಸಕರು ತಮ್ಮದೇ ಆದ ತತ್ವ-ಸಿದ್ಧಾಂತದೊಂದಿಗೆ ಮತ್ತೆ ಮತ್ತೆ ಫಲಾನುಭವಿಗಳ ಪಟ್ಟಿಯಲ್ಲಿ ಬದಲಾವಣೆ ಮಾಡುವ ಸಂಪ್ರದಾಯ ಮುಂದುವರೆದಿದೆ. ಈಗ ಪುನಃ ವಿವಿಧ ಸಂಘಟನೆಗಳಿಂದ ಈಗಾಗಲೇ ಅಂತಿಮವಾಗಿದೆ ಎನ್ನಲಾದ 965 ಫಲಾನುಭವಿಗಳ ಪಟ್ಟಯಲ್ಲಿಯೂ ಅರ್ಹರಿಗೆ ಅನ್ಯಾಯವಾಗುತ್ತಿದೆ, ಆ ಪಟ್ಟಿಯನ್ನು ರದ್ದು ಪಡಿಸಬೇಕೆಂದು ಆಗ್ರಹಿಸಿ ಫೆ.13ಕ್ಕೆ ಪಟ್ಟಣದಲ್ಲಿ ವಿನೂತನ ಪ್ರತಿಭಟನೆಗೆ ಸಿದ್ಧರಾಗಿದ್ದಾರೆ. ಒಟ್ಟಿನಲ್ಲಿ ರಾಜಕೀಯ ವಿರೋಧ, ಕೆಸರೆರೆಚಾಟದ ನಡುವೆ ಆಶ್ರಯ ನಿವೇಶನಗಳು ಹಂಚಿಕೆಯಾಗದೇ ಬಡವರ ಸ್ವಂತ ಸೂರಿನ ಕನಸು ಗಗನ ಕುಸುಮವಾಗಿದೆ.

ರಾಜಕೀಯ ವೈರುಧ್ಯದಿಂದ ನಿವೇಶನಕ್ಕೆ ಅರ್ಜಿ ಸಲ್ಲಿಸಿದ ಫಲಾನುಭವಿಗಳ ಪಟ್ಟಿಯನ್ನು ಆಶ್ರಯ ಕಮಿಟಿ ಅಧ್ಯಕ್ಷರು (ಶಾಸಕರು) ಬದಲಾವಣೆ ಮಾಡುವಲ್ಲಿಯೇ ಕಾಲ ಕಳೆಯುತ್ತಿದ್ದಾರೆ. ಮಾಜಿ ಶಾಸಕ ರಾಮಕೃಷ್ಣ ದೊಡ್ಡಮನಿ ಜಮೀನು ಮಂಜೂರಾತಿ ತಂದು ನಿವೇಶನ ಹಂಚುವಷ್ಟರಲ್ಲಿಯೇ ಅಧಿಕಾರಾವಧಿ ಮುಗಿಯಿತು. ನಂತರ ಶಾಸಕರಾದ ರಾಮಣ್ಣ ಲಮಾಣಿ ಪಟ್ಟಿ ಅಂತಿಮವಾಗುವಷ್ಟರಲ್ಲಿಯೇ ಅವರ ಅಧಿಕಾರವೂ ಪೂರ್ಣಗೊಳಿಸಿದರು. ಈಗ ಶಾಸಕ ಡಾ.ಚಂದ್ರು ಲಮಾಣಿ ಅವರಾದರೂ ನಿವೇಶನ ಕಲ್ಪಿಸಿ ಮನೆ ನಿರ್ಮಿಸಿ, ಬಡವರ

**ಕಸಾಪ ಜಿಲ್ಲಾ ಘಟಕದಿಂದ ಕು.ಶಿ. ಹರಿದಾಸಭಟ್ ದತ್ತಿ ಉಪನ್ಯಾಸ**


# ಜನಪದ ಸಾಹಿತ್ಯಕ್ಕೆ ಅಗಾಧ ಶಕ್ತಿಯಿದೆ

■ವಿಜಯಸಾಕ್ಷಿ ಸುದ್ದಿ, ಗದಗ

ಕನ್ನಡ ಸಾಹಿತ್ಯ ಪರಂಪರೆಗೆ ಜನಪದರು ಭದ್ರ ಬುನಾದಿಯನ್ನು ಒದಗಿಸಿದ್ದಾರೆ. ಜಾನಪದ ಗೀತೆ, ಒಗಟು, ಲಾವಣಿ, ಡೊಳ್ಳಿನ ಪದ, ಕುಟ್ಟು ಬೀಸುಪದ, ಹಂತಿ ಹಾಡು, ಸುಗ್ಗಿ ಹಾಡುಗಳ ಮೂಲಕ ಸಮೃದ್ಧ ಸಾಹಿತ್ಯವನ್ನು ನಿರ್ಮಾಣ ಮಾಡಿದ್ದಾರೆ. ಜೀವನ ಮೌಲ್ಯಗಳನ್ನು ಹಾಡು, ಪ್ರಸಂಗಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಸುಲಭವಾಗಿ ಹಾಡುಬಹುದಾದ, ಎಲ್ಲರೂ ಅರ್ಥೈಸಿಕೊಳ್ಳುವ ಶೈಲಿಯಲ್ಲಿ ನಿರೂಪಿತಗೊಂಡಿವೆ. ಜನಪದ ಸಂಸ್ಕೃತಿ ಜೀವನ ಮೌಲ್ಯಗಳ ಆಗರವಾಗಿದೆ ಎಂದು ಜಾನಪದ ಕಲಾವಿದ ಗವಿಸಿದ್ಧಯ್ಯ ಹಳ್ಳಿಕೇರಿಮಠ ನುಡಿದರು.

ಅವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಆಯೋಜಿಸಿದ ಕು.ಶಿ. ಹರಿದಾಸಭಟ್ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ 'ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು' ಎಂಬ ವಿಷಯವಾಗಿ ಮಾತನಾಡಿದರು.

ಗೌರವ ಕಾರ್ಯದರ್ಶಿ ಶಿವಾನಂದ ಗಿಡ್ನಂದಿ ಮಾತನಾಡಿ, ಕುಂಜಿಬೆಟ್ಟು ಶಿವಹರಿದಾಸ ಭಟ್ ಎಂಬ ಹೆಸರು ಕು.ಶಿ. ಎಂದೇ ಚಿರಪರಿಚಿತವಾಗಿದೆ. ಉಡುಪಿಯ ಸಾಂಸ್ಕೃತಿಕ, ಸಾಹಿತ್ಯಿಕ, ಶೈಕ್ಷಣಿಕ, ಜಾನಪದೀಯ, ಸಂಘಟನಾತ್ಮಕ ಕ್ಷೇತ್ರದಲ್ಲಿ ಅಪಾರ ಕೊಡುಗೆ ನೀಡಿದ್ದಾರೆ. 35ಕ್ಕೂ ಹೆಚ್ಚು ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಿಸಿದ 'ಲೋಕಾಭಿರಾಮ'ದ ಅಂಕಣದ ಮೂಲಕ ಪ್ರಸಿದ್ಧರಾಗಿದ್ದರು. ಕರಾವಳಿಯ



ಯಕ್ಷಗಾನ ಕಲೆಯನ್ನು ವಿದೇಶಗಳಲ್ಲಿ ಪ್ರಚುರ ಪಡಿಸಿದ ಇವರು ಗೋವಿಂದ ಪೈ ಸಂಶೋಧನ ಕೇಂದ್ರದ ಮೂಲಕ ತುಳು ನಿಘಂಟು ಹೊರತರುವಲ್ಲಿ ಮಹತ್ವದ ಪಾತ್ರ ವಹಿಸಿದರೆಂದರು.

ಜಿಲ್ಲಾಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ಜನಪದ ಸಾಹಿತ್ಯಕ್ಕೆ ಅಗಾಧವಾದ ಶಕ್ತಿಯಿದೆ. ಕನ್ನಡ ನಾಡಿನ ಜನರು ಕುರಿತೋದದೆಯಂ ಕಾವ್ಯ ಪ್ರಯೋಗಪರಿಣಿತಮತಿಗಳ್ ಎಂದು ಕವಿರಾಜಮಾರ್ಗಕಾರ ನಿವೇದಿಸಿದ್ದಾನೆ. ಕನ್ನಡಿಗರು ಓದದೆ ಕಾವ್ಯವನ್ನು ಬರೆದರು. ನಿರಕ್ಷರಿಗಳು ಸಾಹಿತ್ಯ ಸೃಷ್ಟಿ ಮಾಡಿದ್ದಾರೆ. ಸರಳ, ಸುಂದರ, ಮೌಲ್ಯಭರಿತವಾದ ಕೃತಿಗಳನ್ನು ಜನಪದರು ಕಟ್ಟಿಕೊಟ್ಟಿದ್ದಾರೆ. ಪ್ರತಿಯೊಂದು ಹಾಡು ಒಂದು ಪಥ್ಯವಾಗಿದೆ. ಕನ್ನಡ ಮೌಖಿಕ ಪರಂಪರೆಯನ್ನು ಜನಪದರು ಗಟ್ಟಿಗೊಳಿಸಿದ್ದಾರೆ. ಆಧುನಿಕ ಸಾಹಿತ್ಯ ಸೃಷ್ಟಿಗೆ ಜನಪದ ಮೂಲ ಬೇರು ಎಂದು ತಿಳಿಸಿದರು.

ಅನಂತಮೋಹನ ಭಟ್ ಮಾತನಾಡಿ, ತಂದೆಯವರ ಜೊತೆಗೆ ತಮ್ಮ ಒಡನಾಟದ ನೆನಪುಗಳನ್ನು ಪುಸ್ತಕದ ರೂಪದಲ್ಲಿ ಹೊರತರಬೇಕೆನ್ನುವ ಆಶಯ ವ್ಯಕ್ತಪಡಿಸಿ, ಸದ್ಯದಲ್ಲಿಯೇ ಕು.ಶಿ.ಯವರ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಸಂಘಟಿಸಲಾಗುವದೆಂದು ತಿಳಿಸಿದರು.

ವೇದಿಕೆ ಮೇಲೆ ಕು.ಶಿ ಜಯದೇವ ಭಟ್ ಉಪಸ್ಥಿತರಿದ್ದರು. ಡಾ.ದತ್ತಪ್ರಸನ್ನ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಕಿಶೋರಬಾಬು ನಾಗರಕಟ್ಟಿ ಸ್ವಾಗತಿಸಿದರು. ಸಿ.ಕೆ.ಎಚ್. ಶಾಸ್ತ್ರಿ(ಕಡಣಿ) ವಂದಿಸಿದರು. ಕಾರ್ಯಕ್ರಮದಲ್ಲಿ ಪ್ರೊ. ಕೆ.ಎಚ್. ಬೇಲೂರ, ಡಾ. ಅನಂತ ಶಿವಪುರ, ಡಾ. ವಾಣಿ ಶಿವಪುರ, ಶೇಕಣ್ಣ ಕಳಸಾಪುರಶೆಟ್ರು, ಚಂದ್ರಶೇಖರ ವಸ್ತ್ರದ, ಡಾ.ಕಾವೆಂಶ್ರೀ, ಡಾ. ಅಕ್ಕಮಹಾದೇವಿ ರೊಟ್ಟಿಮಠ, ಡಾ. ಬಿ.ಎಲ್. ಚವ್ಹಾಣ, ಡಿ.ಜಿ. ಕುಲಕರ್ಣಿ, ಸಿದ್ದಲಿಂಗೇಶ ಸಜ್ಜನಶೆಟ್ಟರ, ಸಂಜೀವ ಹೊಂಬಾಳಿ, ಎಚ್.ಟಿ. ಸಂಜೀವಸ್ವಾಮಿ, ರವಿ ದೇವರಡ್ಡಿ, ಶರಣಪ್ಪ ಹೊಸಂಗಡಿ, ಈರನಗೌಡ ಮಣಕವಾಡ, ಎಂ.ಎಚ್. ಸವದತ್ತಿ, ಅಜಿತ ಘೋರ್ಪಡೆ, ಸಿ.ಎಂ. ಮಾರನಬಸರಿ, ಬಸವರಾಜ ಗಣಪ್ಪನವರ, ಬಿ.ಎಸ್. ಹಿಂಡಿ, ವಿಶ್ವನಾಥ ನಾಲ್ವಾಡದ, ಉಮಾ ಕಣವಿ, ಶಾರದಾ ಕಾತರಕಿ, ಶಾಂತಾ ಬ.ಗುತ್ತಿ, ಶೈಲಜಾ ಗಿಡ್ನಂದಿ, ರಕ್ಷಿತಾ ಗಿಡ್ನಂದಿ, ರತ್ನಕ್ಕ ಪಾಟೀಲ, ನೀಲಮ್ಮ ಅಂಗಡಿ, ಸುಧಾ ಬಳ್ಳಿ, ರತ್ನಾ ಪುರಂತರ, ಶಾರದಾ ಬಾಣದ, ಮಂಜುಳಾ ವೆಂಕಟೇಶಯ್ಯ, ಬಸಯ್ಯ ಬಣಕಾರ, ಎಸ್.ಎ. ದೇಶಪಾಂಡೆ, ಶ್ರೀಕಾಂತ ಬಡ್ಡೂರ, ಶಶಿಕಾಂತ ಕೊರ್ಲಹಳ್ಳಿ, ಜೆ.ಎ. ಪಾಟೀಲ, ಪ್ರ. ತೋ. ನಾರಾಯಣಪುರ, ಜ್ಞಾನೇಶ್ವರ, ಬಸವರಾಜ ವಾರಿ ಮುಂತಾದವರು ಉಪಸ್ಥಿತರಿದ್ದರು.

# ಜೀತ ಮುಕ್ತ ಸಮಾಜಕ್ಕಾಗಿ ಶ್ರಮಿಸೋಣ

■ವಿಜಯಸಾಕ್ಷಿ ಸುದ್ದಿ, ಗದಗ

ಜೀತ ಪದ್ಧತಿಯು ಒಂದು ಅನಿಷ್ಠ ಪದ್ಧತಿಯಾಗಿದ್ದು, ಇದರಿಂದಾಗಿ ಅನೇಕ ಜನರು ಜೀವನಪೂರ್ತಿ ಉಳ್ಳವರ ಗುಲಾಮಗಿರಿ ಮಾಡುತ್ತ ಅದರಲ್ಲಿಯೇ ದಿನಗಳನ್ನು ಕಳೆಯುತ್ತಿದ್ದಾರೆ. ಈ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ನೊಂದವರು ಸ್ವತಂತ್ರ ಬದುಕು ರೂಪಿಸಿಕೊಳ್ಳಲು ನಾವೆಲ್ಲರೂ ಶ್ರಮಿಸೋಣವೆಂದು ಗದಗ ಶಹರ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್. ಬುರಡಿ ಹೇಳಿದರು.

ಅವರು ಗದುಗಿನ ಕೆ.ವ್ಹಿ.ಎಸ್.ಆರ್. ಪ್ರೌಢಶಾಲೆಯಲ್ಲಿ ಜರುಗಿದ ಜೀತ ಪದ್ಧತಿ ನಿರ್ಮೂಲನಾ



ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿ ಮಾತನಾಡಿದರು.

ನಾವೆಲ್ಲರೂ ಸ್ವತಂತ್ರರು. ಸುಂದರ ಬದುಕು ರೂಪಿಸಿಕೊಳ್ಳಲು ನಮ್ಮ ಸಂವಿಧಾನ ಅವಕಾಶ ನೀಡಿದ್ದು, ಮೇಲು-ಕೀಳು, ಜಾತಿ-ಬೇಧಗಳನ್ನು ಬದಿಗೊತ್ತಿ ಎಲ್ಲರೂ ಒಂದೇ ಎಂಬ ಭಾವನೆಯಿಂದ ಬದುಕು ರೂಪಿಸಿಕೊಳ್ಳಬೇಕು. ಜೀತ ಪದ್ಧತಿ ಇನ್ನೂ ಕೆಲವು ಕಡೆ ಜೀವಂತವಾಗಿದ್ದು, ಜೀತ-ಕ್ಕೆ ಇಟ್ಟುಕೊಳ್ಳುವುದು, ಜೀತ ಮಾಡುವುದು ಎರಡೂ ತಪ್ಪು. ಇದನ್ನು ಅರಿತು ನಡೆಯಬೇಕೆಂದರು.

ಸಂಪನ್ಮೂಲ ವ್ಯಕ್ತಿ ಕವಿತಾ ಬೇಲೇರಿ ಮಾತನಾಡಿ, ಇತಿಹಾಸದ ಪುಟಗಳಲ್ಲಿ ಜೀತ ಪದ್ಧತಿ ಜೀವಂತವಾಗಿತ್ತು. ಜೀತ ಪದ್ಧತಿಯಿಂದಾಗಿ ಆ ಕುಟುಂಬ, ವ್ಯಕ್ತಿ ಸ್ವಾತಂತ್ರವನ್ನು ಕಳೆದುಕೊಳ್ಳುವಂತಾಗಿತ್ತು. ಇಂತಹ ಘಟನೆಗಳು ಮುಂದುವರಿಯದೇ ಇಲ್ಲಿಗೆ ಕೊನೆಗೊಂಡು, ಜೀತ ಪದ್ಧತಿ ನಿರ್ಮೂಲನೆಯಾಗಬೇಕು ಎಂದರು.

ಮತ್ತೋರ್ವ ಸಂಪನ್ಮೂಲ ವ್ಯಕ್ತಿ ಪ್ರಕಾಶ ಮಂಗಳೂರ ಮಾತನಾಡಿ, ಕೆಲವು ಕಡೆಗಳಲ್ಲಿ ಜೀತ ಪದ್ಧತಿಗಳು ಕಂಡೂ ಕಾಣದಂತೆ ನಡೆಯುತ್ತಿವೆ. ಇದೊಂದು ಅಮಾನವೀಯ ಕೃತ್ಯ. ನಮ್ಮ ಯುವಪೀಳಿಗೆ ಜಾಗೃತಗೊಂಡು ಈ ಕುರಿತು ಸಮುದಾಯದಲ್ಲಿ ಜಾಗೃತಿ ಮೂಡಿಸಬೇಕೆಂದರು.

ಶಿಕ್ಷಣ ಸಂಯೋಜಕ ಶಾಮ ಲಾಂಡೆ ಸ್ವಾಗತಿಸಿದರು. ಮುಖ್ಯೋಪಾಧ್ಯಾಯೆ ಪಿ.ಟಿ. ಬಿಸನಳ್ಳಿ ನಿರೂಪಿಸಿದರು. ಎಸ್. ಕೆ. ಬಸಾಪೂರ ವಂದಿಸಿದರು. ಕಾರ್ಯಕ್ರಮದಲ್ಲಿ ರಾಜೀವ ಗಾಂಧಿ ನಗರದ ಸರ್ಕಾರಿ ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲೆಯ ಮಕ್ಕಳು ಹಾಗೂ ಶಿಕ್ಷಕರು ಭಾಗವಹಿಸಿದ್ದರು.

**ಎಂ.ಜಿ. ಚಾರಿಟೇಬಲ್ ಟ್ರಸ್ಟ್, ಅಬುಹುರೇರಾ ಮಸ್ಜಿದ್ ಸಹಯೋಗ**

# ಉಮ್ರಾ ಯಾತ್ರಿಗಳಿಗೆ ಸನ್ಮಾನ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಎಂ.ಜಿ. ಚಾರಿಟೇಬಲ್ ಟ್ರಸ್ಟ್ ಹಾಗೂ ಅಬುಹುರೇರಾ ಮಸ್ಜಿದ್ ಸಹಯೋಗದಲ್ಲಿ ಸೋಮವಾರ ಪವಿತ್ರ ಉಮ್ರಾ ಯಾತ್ರಿಗಳನ್ನು ಸನ್ಮಾನಿಸಲಾಯಿತು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಮೌಲಾನಾ ಮಹಮ್ಮದ್ ಅಲಿ ಮಾತನಾಡಿ, ಪ್ರತಿಯೊಬ್ಬ ಮುಸ್ಲಿಮನು ಜೀವನದಲ್ಲಿ ಒಮ್ಮೆಯಾದರೂ ಹಜ್ ಅಥವಾ ಉಮ್ರಾ ಯಾತ್ರೆ ಮಾಡಬೇಕೆಂದರು. ಮುಖ್ಯ ಅತಿಥಿಯಾಗಿ ಆಗಮಿಸಿದ ಗದಗ ಶಹರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಆರ್. ಎಸ್. ಬುರಡಿ ಮಾತನಾಡಿ, ಡಾ. ಅಂಬೇಡ್ಕರರು ಹೇಳಿದಂತೆ, ಶಿಕ್ಷಣ ಎಂಬುದು ಹುಲಿಯ ಹಾಲು. ಅದನ್ನು ಕುಡಿದವನು ಘರ್ಜಿಸಲೇಬೇಕು. ಹೀಗಾಗಿ ಈ ಭಾಗದಲ್ಲಿರುವ ಎಲ್ಲಾ ಪಾಲಕರು, ಮಕ್ಕಳಿಗೆ ಅತ್ಯುತ್ತಮವಾದ ಶಿಕ್ಷಣವನ್ನು ಕೊಟ್ಟು ಅವರನ್ನು ಆಸ್ತಿಯನ್ನಾಗಿ ಮಾಡಿ ಎಂದು ಸಲಹೆ ನೀಡಿದರು.

ಡಯಟ್ ಉಪನ್ಯಾಸಕ ಜಿ.ಡಿ. ದಾಸರ್ ಮಾತನಾಡಿ, ಈ ಭಾಗದಲ್ಲಿ ವಿದ್ಯಾರ್ಥಿಗಳಿಗೆ ಅತ್ಯುತ್ತಮವಾದ ಶಿಕ್ಷಣ ಮತ್ತು ಸಂಸ್ಕಾರವನ್ನು ಕೊಡಲು ಎಂ.ಜಿ. ಚಾರಿಟೇಬಲ್ ಟ್ರಸ್ಟ್ ಶ್ರಮಿಸುತ್ತಿರುವುದು ಶ್ಲಾಘನೀಯ ಎಂದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಹಾಜಿ ಹುಸೇನಸಾಬ ಪಲ್ಲೇದ, ಯಾವ ವ್ಯಕ್ತಿಗೆ ಅಲ್ಲಾಹನ ಆಜ್ಞೆ ಆಗುತ್ತದೆ ಅವನೇ ಅಲ್ಲಾಹನ ಮನೆಗೆ ಹೋಗುತ್ತಾನೆ ಎಂದರು. ಎಂ.ಜಿ. ಚಾರಿಟೇಬಲ್ ಟ್ರಸ್ಟ್ ವತಿಯಿಂದ ಟ್ಯೂಷನ್ ಪ್ರಾರಂಭಿಸಿ ಅದರಲ್ಲಿ ಪರೀಕ್ಷೆ ನಡೆಸಿ, ಹೆಚ್ಚಿನ ಅಂಕ ಪಡೆದ ಮಕ್ಕಳಿಗೆ ಬಹುಮಾನ ನೀಡಲಾಯಿತು.

ಟ್ರಸ್ಟ್‌ನ ಕಾರ್ಯದರ್ಶಿ ಮೌಲಾನಾ ಅಬ್ದುಲ್ ಗಫೂರ್ ಪಲ್ಲೇದ ಟ್ರಸ್ಟ್ ನಡೆದುಬಂದ ದಾರಿ ಹಾಗೂ ಉದ್ದೇಶಗಳನ್ನು ವಿವರಿಸಿದರು. ಗ್ರಾಮೀಣ ವಲಯದ ಬಿಇಓ ವಿ.ವಿ. ನಡವಿನಮನಿ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ, ಉಮ್ರಾ ಯಾತ್ರಿಗಳನ್ನು ಸನ್ಮಾನಿಸಿದರು. ಶಿಕ್ಷಕ ಮಹಮ್ಮದ್ ಯೂಸುಫ್ ಯರಗುಡಿ ಕಾರ್ಯಕ್ರಮ ನಿರೂಪಿಸಿದರು.

ಮುಫ್ತಿ ಮೌಲಾನಾ, ಅಬ್ದುಲ್ ಸಮದ್ ಜಾಕಾತಿ, ಮುಂಬೈ ವಾಲೆ, ಮಹಮ್ಮದ್ ಸಾಬ್ ಬೋದ್ಲೆಖಾನ್, ಚಾಂದಸಾಬ್ ಅಬ್ಬಿಗೇರಿ, ಬಾಬಾಜನ್ ಹಣಗಿ, ಬಾಬಾಜಾನ್ ಕೊಡತ್ಗೇರಿ, ಮೈನುದ್ದಿನ ಗುಜಮಾಗಡಿ, ಅಹಮದ್ ಕಲೆಗಾರ್, ಸಿಕಂದರ್ ಶಿರಹಟ್ಟಿ, ಮುಸ್ತಾಕ್ ಹಾಫಿಜ್ ರೋಣ ಮುಂತಾದವರಿದ್ದರು.

# ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ಅಟಲ್ ಭೂಜಲ ಯೋಜನೆಗೆ ಒಳಪಡುವ ಗ್ರಾಮ ಪಂಚಾಯತ್ ವ್ಯಾಪ್ತಿಯ ಹಳ್ಳಿಗಳಲ್ಲಿರುವ ಸಜೀವ ನಾಲೆಗಳೂ, ಸಣ್ಣ ನೀರಾವರಿ ಕೆರೆ ಹಾಗೂ ಚೆಕ್ ಡ್ಯಾಮ್ ಗಳ ಪಕ್ಕದಲ್ಲಿ ಜಮೀನು ಇರುವ ರೈತರು ಆ ಹಳ್ಳ/ ಕೆರೆ/ ಚೆಕ್ ಡ್ಯಾಮ್ ನೀರನ್ನು ಬಳಸಿ ಬೆಳೆಗಳಿಗೆ ನೀರಾವರಿ ಮಾಡಿಕೊಳ್ಳಲು ಇಚ್ಛಿಸಿದಲ್ಲಿ ಸಹಾಯ ಧನದಲ್ಲಿ ತುಂತುರು ನೀರಾವರಿ ಘಟಕಗಳನ್ನು ಪಡೆಯಲು ಅರ್ಜಿ ಸಲ್ಲಿಸಬಹುದಾಗಿದೆ.ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರ ಹುಲಕೋಟಿ/ಬೆಟಗೇರಿ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿ. ಗದಗ ಇಲ್ಲಿ ಸಂಪರ್ಕಿಸಬಹುದಾಗಿದೆ.

# ಕೇಂದ್ರದಿಂದ ಮಲತಾಯಿ ಧೋರಣೆ





■ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ

ರಾಜ್ಯದ ಪಾಲಿನ ತೆರಿಗೆ ಹಣವನ್ನು ಪೂರ್ಣ ಪ್ರಮಾಣ ನೀಡದೆ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಅನುಸರಿಸುತ್ತಿದ್ದು, ರಾಜ್ಯದ ಅಸ್ಮಿತೆಯ ಪ್ರಶ್ನೆಗಳು ಬಂದಾಗ ರಾಜ್ಯದ ಪರ ಧ್ವನಿಗೂಡಿಸಿ, ನಮ್ಮ ಸಂಸದರು ದೇಶದ ಅಭಿವೃದ್ಧಿಯ ಕಡೆಗೆ ಗಮನ ಹರಿಸದೇ ಕೇವಲ ಮತ-ಮಾನ್ಯಗಳ ಹೆಸರಿನಲ್ಲಿ ರಾಜಕೀಯ ಮಾಡುತ್ತಿರುವುದು ಖಂಡನೀಯ ಎಂದು ಭಾರತ ಕಮ್ಯುನಿಸ್ಟ್ ಪಕ್ಷದ ತಾಲೂಕು ಕಾರ್ಯದರ್ಶಿ ಗುಡಿಹಳ್ಳಿ ಹಾಲೇಶ್ ಆರೋಪಿಸಿದರು.

ಪಟ್ಟಣದ ಇಜಾರಿ ಶಿರಸಪ್ಪ ವೃತ್ತದಲ್ಲಿ ಸೋಮವಾರ ಭಾರತ ಕಮ್ಯುನಿಸ್ಟ್ ಪಕ್ಷದ ವತಿಯಿಂದ ಕೇಂದ್ರದ ಬಜೆಟ್‌ನಲ್ಲಿ ತೆರಿಗೆ ಹಣ ನೀಡುವಲ್ಲಿ ರಾಜ್ಯಕ್ಕೆ ತಾರತಮ್ಯವೆಸಗಿದೆ ಎಂದು ನಡೆಸಿದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು. ದೇಶದಲ್ಲಿಯೇ ಅತೀ ಹೆಚ್ಚು ತೆರಿಗೆ ಪಾವತಿ ಮಾಡುವಲ್ಲಿ ಕರ್ನಾಟಕ ರಾಜ್ಯವು ಎರಡನೇ ಸ್ಥಾನದಲ್ಲಿದ್ದು, ನಮ್ಮಿಂದ ಪಡೆದ ತೆರಿಗೆ ಹಣವನ್ನು ನಮ್ಮ ರಾಜ್ಯಕ್ಕೆ ಪೂರ್ಣ ಪ್ರಮಾಣದಲ್ಲಿ ನೀಡದೇ ಮೂಗಿಗೆ ತುಪ್ಪ ಸವೆರಿದೆ. ಅಗಾಧ ಒಕ್ಕೂಟ ವ್ಯವಸ್ಥೆಯಿಂದ ಒಳಗೊಂಡಿರುವ ನಮ್ಮ ದೇಶವು ಸಂವಿಧಾನದ ಆಶಯದಂತೆ ಎಲ್ಲಾ ರಾಜ್ಯಗಳಿಗೂ ಅಲ್ಲಿನ ಜನಸಂಖ್ಯೆಗನುಗುಣವಾಗಿ ಸೂಕ್ತ ರೀತಿಯಲ್ಲಿ ತೆರಿಗೆ ಹಂಚಿಕೆಯಾಗದೇ ಬಿಜೆಪಿ ಆಡಳಿತವಿರುವ ರಾಜ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಿದೆ ಎಂದರು. ಪ್ರತಿಭಟನೆಯಲ್ಲಿ ಹೆಚ್.ಸಂತೋಷ್, ರಮೇಶ ನಾಯ್ಕ, ಬಳಿಗನೂರು ಕೊಟ್ರೇಶ್, ಚಂದ್ರನಾಯ್ಕ, ರಾಗಿಮಸಲವಾಡ ಹನುಮಂತಪ್ಪ, ಗುಡಿಹಳ್ಳಿ ಶಿವರಾಮ್, ದೊಡ್ಡಬಸವರಾಜ, ಡಿ.ಹೆಚ್. ಅರುಣ ಮುಂತಾದವರು ಭಾಗವಹಿಸಿದ್ದರು.

## ನಿಧನ ವಾರ್ತೆ

**ಮಹಾದೇವಪ್ಪ ಬಸವಂತಪ್ಪ ಕರಗಣ್ಣವರ**



ನರೇಗಲ್ಲ: ಸಮೀಪದ ಬೂದಿಹಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷ ಮಹಾದೇವಪ್ಪ ಬಸವಂತಪ್ಪ ಕರಗಣ್ಣವರ (45) ಸೋಮವಾರ ನಿಧನರಾದರು. ಮೃತರಿಗೆ ತಾಯಿ, ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗದವರು ಇದ್ದಾರೆ.

**ಸಂತಾಪ:** ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕ ವೃಂದದವರು ಮೃತ ಮಹಾದೇವಪ್ಪ ಕರಗಣ್ಣವರ ಗುಣಗಾನ ಮಾಡಿ ಎರಡು ನಿಮಿಷ ಮೌನಾಚರಣೆಯೊಂದಿಗೆ ಸಂತಾಪ ಸೂಚಿಸಿದರು.

# ಧರ್ಮದ ತಳಹದಿಯಲ್ಲಿ ಸಾಗಿ




■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಶಿಕ್ಷಣ ಸೇವೆಯೇ ದೇವರ, ಸಮಾಜದ ಸೇವೆ ಎಂಬ ಪರಿಕಲ್ಪನೆಯೊಂದಿಗೆ ಬಸವಾದಿ ಶರಣರ ಕಾಲದಿಂದಲೂ ತ್ರಿವಿಧ ದಾಸೋಹ ಸೇವೆ ಮಾಡುವ ಮೂಲಕ ಮತ-ಮಾನ್ಯಗಳು ಸಮಾಜದ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿವೆ ಎಂದು ಹೂವಿನಶಿಗ್ಲಿ ಮಠದ ಶ್ರೀ ಚನ್ನವೀರಮಹಾಸ್ವಾಮಿಗಳು ಹೇಳಿದರು.

ಅವರು ಶ್ರೀ ಮಠದಲ್ಲಿ ಲಕ್ಷ್ಮೇಶ್ವರದ ಅಗಡಿ ಇಂಜನಿಯರಿಂಗ್ ಕಾಲೇಜಿನ ಎನ್‌ಎಸ್‌ಎಸ್ ಘಟಕದಿಂದ ಗುರುಕುಲದ ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿಗಳ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಬದುಕು ಮೌಲ್ಯಯುತ ಮತ್ತು ಸ್ಮರಣೀಯವಾಗಿರಲು ಧರ್ಮದ ತಳಹದಿಯಲ್ಲಿ ಸಾಗಬೇಕು.

ಹುಟ್ಟು ಆಕಸ್ಮಿಕ-ಸಾವು ನಿಶ್ಚಿತ. ನಿತ್ಯ ಜೀವನದ ಹೋರಾಟ, ಜಂಜಾಟಗಳ ನಡುವೆಯೂ ಕೈಲಾದಮಟ್ಟಿಗೆ ಧರ್ಮ, ಶಿಕ್ಷಣ, ಸಾಮಾಜಿಕ ಸೇವೆ ಮಾಡಬೇಕು. ಮಠ-ಮಾನ್ಯಗಳ ಸೇವೆಗೆ ಸಮಾಜದ ಕೊಡುಗೆ ಮುಖ್ಯವಾಗಿದೆ.

ಈ ನಿಟ್ಟಿನಲ್ಲಿ ಲಕ್ಷ್ಮೇಶ್ವರದ ಅಗಡಿ ಇಂಜನಿಯರಿಂಗ್ ಕಾಲೇಜಿನವರು ಪ್ರತಿವರ್ಷವೂ ಗುರುಕುಲದ ಬಡ ಮಕ್ಕಳ ಶಿಕ್ಷಣಕ್ಕೆ ಪೂರಕವಾದ ಸೇವೆ-ದಾನ-ಧರ್ಮದ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ ಎಂದು ಸಂಸ್ಥೆಯ ಪ್ರಗತಿಗೆ ಹರಸಿದರು.

ಈ ವೇಳೆ ಕಾಲೇಜಿನ ಪಿಯು ವಿಭಾಗದ ಪ್ರಾಚಾರ್ಯ ಡಾ. ಎನ್.ಹಯವದನ, ಎನ್‌ಎಸ್‌ಎಸ್ ಅಧಿಕಾರಿ ಪ್ರೊ. ಸೋಮಶೇಖರ ಕೆರಿಮನಿ, ಪ್ರೊ. ಎಸ್.ವಿ. ಮಹಾಪುರುಷ, ಪ್ರತಿಮಾ ಮಹಾಪುರುಷ, ಪ್ರಕಾಶ ಹೊಂಗಲ, ವಿಕ್ರಂ ಶಿರೋಳ, ಕಿರಣ ಕೋತಿನ, ಪಿ.ಜಿ. ಯಲವಗಿ, ಬಸವರಾಜ ಸೊರಟೂರ, ಷಣ್ಮುಖ ಜಿ, ರಾಜೇಶ್ವರಿ ಜಿ, ಮಲ್ಲಯ್ಯ ಹಿರೇಮಠ ಇದ್ದರು.



■ವಿಜಯಸಾಕ್ಷಿ ಸುದ್ದಿ, ಗದಗ

ಭಾರತೀಯ ಜನತಾ ಪಾರ್ಟಿ ಗದಗ ಜಿಲ್ಲಾ ಕಾರ್ಯಾಲಯದಲ್ಲಿ ಲೋಕಸಭಾ ಸಂಚಾಲಕ ಕಳಕಪ್ಪ ಬಂಡಿ ನೇತೃತ್ವದಲ್ಲಿ ಲೋಕಸಭಾ ಚುನಾವಣಾ ಪೂರ್ವ ತಯಾರಿ ಸಭೆ ಜರುಗಿತು. ಈ ಸಂದರ್ಭದಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ತೋಟಪ್ಪ(ರಾಜು) ಕುರಡಗಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಕ್ಕಿರೇಶ ರಟ್ಟಿಹಳ್ಳಿ, ಲಿಂಗರಾಜ ಪಾಟೀಲ, ಆರ್.ಕೆ. ಚವ್ಹಾಣ ಹಾಗೂ ಪಕ್ಷದ ಮಂಡಲ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು ಉಪಸ್ಥಿತರಿದ್ದರು.

# ಚಿಂಚಲಿ ಗ್ರಾಮದಲ್ಲಿ ಸಂವಿಧಾನ ಜಾಗೃತಿ ಕಾರ್ಯಕ್ರಮ



■ವಿಜಯಸಾಕ್ಷಿ ಸುದ್ದಿ, ಗದಗ

ಭಾರತದ ಸಂವಿಧಾನ ಅಂಗೀಕಾರಗೊಂಡು ಎಪ್ಪತ್ತೈದು ವರ್ಷ ಪೂರ್ಣಗೊಂಡ ಹಿನ್ನಲೆಯಲ್ಲಿ ಸಾರ್ವಜನಿಕರಲ್ಲಿ ಸಂವಿಧಾನದ ಮಹತ್ವ ಕುರಿತು ಜಾಗೃತಿ ಮೂಡಿಸಲು ನಡೆಯುತ್ತಿರುವ ಸಂವಿಧಾನ ಜಾಥಾವು ಗದಗ ತಾಲೂಕಿನ ಚಿಂಚಲಿ ಗ್ರಾಮ ಪಂಚಾಯತಿಯಲ್ಲಿ ಸಂವಿಧಾನ ಜಾಗೃತಿ ಕಾರ್ಯಕ್ರಮ ಜರುಗಿತು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದ್ಯಸರು, ಅಧಿಕಾರಿಗಳು, ಶಿಕ್ಷಕರು, ವಿದ್ಯಾರ್ಥಿಗಳು, ಗ್ರಾಮದ ಹಿರಿಯರು ಹಾಜರಿದ್ದು ಯಶಸ್ವಿಗೊಳಿಸಿದರು.

# ಬಿಸಿಎ 4ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಸಾಧನೆ

■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಮನೋರಮಾ ಮಹಾವಿದ್ಯಾಲಯದ ಶೈಕ್ಷಣಿಕ ಸಾಲಿನ ಬಿಸಿಎ ಕೋರ್ಸಿನ 4ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಉತ್ತಮ ಸಾಧನೆಗೈದಿದ್ದಾರೆ.

ಪೂಜಾ ಮುಳ್ಳಾಳ 683 ಅಂಕಗಳೊಂದಿಗೆ ಪ್ರಥಮ ಸ್ಥಾನ, ತಬಸುಮ್ ಕವಲೂರ 668 ಅಂಕಗಳೊಂದಿಗೆ ದ್ವಿತೀಯ ಸ್ಥಾನ, ರೆಚೇಲ 660 ಅಂಕಗಳೊಂದಿಗೆ ತೃತೀಯ ಸ್ಥಾನ, ನಿವೇದಿತಾ ಅಸುಂಡಿ 658 ಅಂಕಗಳೊಂದಿಗೆ 4ನೇ ಸ್ಥಾನ, ಕಾವ್ಯಾ ಕೋಳುರ 644 ಅಂಕಗಳೊಂದಿಗೆ 5ನೇ ಸ್ಥಾನ ಪಡೆದಿದ್ದಾರೆ.

ಮಹಾವಿದ್ಯಾಲಯಕ್ಕೆ ಕೀರ್ತಿ ತಂದ ವಿದ್ಯಾರ್ಥಿಗಳ ಸಾಧನೆಯನ್ನು ಸಂಸ್ಥೆಯ ಚೇರಮನ್ ಎನ್.ಎಮ್. ಕುಡತರಕರ, ಪ್ರಾಚಾರ್ಯ ಬಿ.ಎಸ್. ಹಿರೇಮಠ, ಆಡಳಿತಾಧಿಕಾರಿ ಕಿಶೋರ ಮುದಗಲ್ಲ, ಸಂಸ್ಥೆಯ ನಿರ್ದೇಶಕರಾದ ಮಂಜುನಾಥ ಕುಡತರಕರ, ಸಂಜಯ ಕುಡತರಕರ, ಚೇತನ ಕುಡತರಕರ, ಸಂಯೋಜಕಿ ಪ್ರೊ. ಸವಿತಾ ಪೂಜಾರ ಹಾಗೂ ಸಿಬ್ಬಂದಿ ವರ್ಗದವರು ಶ್ಲಾಘಿಸಿದ್ದಾರೆ.

# ತೋಂ. ಸಿದ್ಧಲಿಂಗೇಶ್ವರ ನೂತನ ಕಲ್ಯಾಣ ಮಂಟಪದ ಶಂಕುಸ್ಥಾಪನೆ ಇಂದು

■ ವಿಜಯಸಾಕ್ಷಿ ಸುದ್ದಿ, ಗದಗ

ಜಗದ್ಗುರು ತೋಂಟದಾರ್ಯ ಮಠದ ಶಾಖಾಮಠ ಇರುವ ಶಿಕಾರಿಪುರ ತಾಲೂಕು ಈಸೂರು ಗ್ರಾಮದಲ್ಲಿ ಶಿಕಾರಿಪುರ-ಶಿವಮೊಗ್ಗ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಶ್ರೀ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಎರಡೂವರೆ ಎಕರೆ ನಿವೇಶನದಲ್ಲಿ ಶ್ರೀ ತೋಂಟದ ಸಿದ್ಧಲಿಂಗೇಶ್ವರ ಕಲ್ಯಾಣ ಮಂಟಪದ ಶಂಕುಸ್ಥಾಪನೆ ಕಾರ್ಯಕ್ರಮ ಫೆ.13ರಂದು ಮುಂಜಾನೆ 10.30ಕ್ಕೆ ಜರುಗಲಿದೆ.



ಲಿಂಗೈಕ್ಯ ಡಾ.ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ದಿವ್ಯ ಪ್ರಕಾಶದಲ್ಲಿ, ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳ ಹಾಗೂ ಶಿವಮೊಗ್ಗದ ಬೆಕ್ಕಿನಕಲ್ಮಠದ ಜಗದ್ಗುರು ಮಲ್ಲಿಕಾರ್ಜುನ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಕಾರ್ಯಕ್ರಮ ಜರುಗಲಿದ್ದು, ಪಾಂಡುಮಟ್ಟಿ-ಕಮ್ಮತಹಳ್ಳಿಯ ಪೂಜ್ಯ ಗುರುಬಸವ ಮಹಾಸ್ವಾಮಿಗಳು ಸಮ್ಮುಖವಹಿಸುವರು. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಭಾಗವಹಿಸಿ ಶುಭ ಹಾರೈಸುವರು. ಶಿವಮೊಗ್ಗ ಲೋಕಸಭಾ ಸದಸ್ಯ ಬಿ.ವೈ. ರಾಘವೇಂದ್ರ ಶಂಕುಸ್ಥಾಪನೆ ನೆರವೇರಿಸುವರು.

ಶಿಕಾರಿಪುರ ಶಾಸಕ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಮಾಜಿ ಸಚಿವ ಎಸ್.ಎಸ್. ಪಾಟೀಲ, ಶಿವಮೊಗ್ಗ ಮಲೆನಾಡು ಅಭಿವೃದ್ಧಿ ಮಂಡಳಿಯ ಮಾಜಿ ಅಧ್ಯಕ್ಷ ಕೆ.ಎಸ್. ಗುರುಮೂರ್ತಿ, ತೋಂಟದಾರ್ಯ ವಿದ್ಯಾಪೀಠದ ಕಾರ್ಯದರ್ಶಿ ಎಸ್.ಎಸ್. ಪಟ್ಟಣಶೆಟ್ಟಿ, ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಎನ್.ವಿ. ಈರೇಶ, ಈಸೂರು ತೋಂಟದಾರ್ಯ ಮಠದ ವ್ಯವಸ್ಥಾಪಕರಾದ ಜಗದೀಶ ಬಡಕಳ್ಳಿ, ಅನುಭಾವಿಗಳಾದ ಕೆ.ಬಿ. ಬಸವರಾಜಪ್ಪ, ಈಸೂರು ಗ್ರಾ.ಪಂ ಅಧ್ಯಕ್ಷರಾದ ಕೆ.ಜಿ ರೇಖಾ ಪಾಟೀಲ, ಈಸೂರು ಧರ್ಮದರ್ಶಿ ಕಮಿಟಿ ಅಧ್ಯಕ್ಷರಾದ ಧನಂಜಯ, ಈಸೂರು ವೀರಶೈವ ಸಮಾಜದ ಅಧ್ಯಕ್ಷ ಶಿವಾನಂದಪ್ಪ ಕೆಂಪಳ್ಳಿ, ಚಿಕ್ಕಜೋಗಿಹಳ್ಳಿ ಧರ್ಮದರ್ಶಿ ಕಮಿಟಿಯ ಅಧ್ಯಕ್ಷ ಯೋಗೀಶ್ವರಪ್ಪ ಎಮ್. ಅತಿಥಿಗಳಾಗಿ ಆಗಮಿಸವರು.

ಈಸೂರು ತೋಂಟದಾರ್ಯ ಮಠದ ಸಕಲ ಸದ್ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಈಸೂರು ತೋಂಟದಾರ್ಯ ಮಠ ಪ್ರಕಟಣೆ ಮೂಲಕ ತಿಳಿಸಿದೆ.

# ನೀರು ಪೂರೈಕೆ ಯೋಜನೆ ಪೂರ್ಣಗೊಳಿಸಲು ಮನವಿ



■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ನಗರಸಭೆಯ 26ನೇ ವಾರ್ಡ್‌ನ ಭಾಗಗಳಲ್ಲಿ 24*7 ನೀರು ಪೂರೈಕೆಯ ಯೋಜನೆಯನ್ನು ಪೂರ್ಣಗೊಳಿಸಬೇಕೆಂದು ವಾರ್ಡ್ ಸದಸ್ಯೆ ಹುಲಿಗೆಮ್ಮ ಗಂಗಾಸಾ ಹಬೀಬ ಗದಗ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

26ನೇ ವಾರ್ಡ್‌ನ ವಾಲ್ಕೇಶ್ವರ ನಗರ, ಅಬ್ಬಿಗೇರಿ ಕಂಪೌಂಡ, ಅಜಂತಾ ಹೋಟೇಲ್‌ದಿಂದ ಕುಂಬಾರ ಓಣಿ, ಬಿಎಸ್‌ಎನ್‌ಎಲ್ ಟಾವರ್‌ದಿಂದ ಬಸವೇಶ್ವರ ವೃತ್ತದವರೆಗೆ, ಮೂರಶಿಳ್ಳಿನ ವಠಾರ, ಬೇವಿನಕಟ್ಟಿ ಓಣಿ, ಹಬೀಬ ಓಣಿ ಹಾಗೂ ಬೂಸ್ತ ಗ್ಯಾಸ್ ಅಂಗಡಿ ಹಿಂದಿನ ಭಾಗದಲ್ಲಿ 24*7 ಕಾಮಗಾರಿ ಅಪೂರ್ಣಗೊಂಡಿದ್ದರಿಂದ ನೀರು ಪೂರೈಕೆಯಾಗದೇ ತೊಂದರೆ ಅನುಭವಿಸುತ್ತಿದ್ದಾರೆ.

ಎಸ್‌ಪಿಎಂಎಲ್ ಕಂಪನಿ (ಕೆಯುಐಡಿಎಫ್‌ಸಿ) ಕಳೆದ 7 ವರ್ಷಗಳಿಂದ ಅಪೂರ್ಣಗೊಂಡಿರುವ ಕಾಮಗಾರಿಯನ್ನು ಹಾಗೆಯೇ ಉಳಿಸಿದ್ದಾರೆ.

ಇದೀಗ ಬೇಸಿಗೆ ಬರುತ್ತಿದ್ದು, ನೀರಿಗಾಗಿ ಸಾರ್ವಜನಿಕರು ಪರದಾಡುವಂತಾಗಿದೆ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಪ್ರಥಮ ಆದ್ಯತೆಯ ಮೇರೆಗೆ ಸಂಬಂಧಿಸಿದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಿ ಕ್ರಮ ಕೈಗೊಳ್ಳಬೇಕು ಎಂದು ವಿನಂತಿಸಿದರು.

# ಸಂವಿಧಾನ ಜಾಗೃತಿ ಕಾರ್ಯಕ್ರಮ



■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ತಾಲೂಕಿನ ಯಲಿಶಿರೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸೋಮವಾರದಂದು ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಸ್ವಾಗತಿಸಿ, ಗ್ರಾಮ ಪಂಚಾಯತ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಎಲ್ಲಾ ಸದಸ್ಯರು, ಸಾರ್ವಜನಿಕರು ಹಾಗೂ ಅಧಿಕಾರಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಸಂವಿಧಾನ ಪೀಠಿಕೆಯನ್ನು ಜನಸಾಮಾನ್ಯರಿಗೆ ಅರ್ಥೈಸಬೇಕು. ಈ ಮೂಲಕ ಜನಸಾಮಾನ್ಯರು ಸಹ ಸಂವಿಧಾನವನ್ನು ಅರಿತು ತಮ್ಮ ಹಕ್ಕು ಕರ್ತವ್ಯಗಳನ್ನು ಪಾಲಿಸಬೇಕು. ಸಂವಿಧಾನ ದತ್ತವಾಗಿ ಇರುವ ಹಕ್ಕುಗಳ ಮೂಲಕ ಸಮ ಸಮಾಜ ನಿರ್ಮಾಣಕ್ಕೆ ಜನ ಸಾಮಾನ್ಯರೆಲ್ಲರೂ ಒಂದು ಎಂಬ ಭ್ರಾತೃತ್ವ ಭಾವನೆ ಮೂಡಿಸುವ ಆಶಯವನ್ನು ಸಂವಿಧಾನ ಜಾಗೃತಿ ಕಾರ್ಯಕ್ರಮ ಒಳಗೊಂಡಿದೆ.

## ಮೌನಯೋಗಿ ಚಿಕೇನಕೊಪ್ಪದ ಶ್ರೀ ಚನ್ನವೀರ ಶರಣರ 29ನೇ ಪುಣ್ಯಸ್ಮರಣೋತ್ಸವ

# ಚಿಕೇನಕೊಪ್ಪ ಜಾತ್ರಾ ಮಹೋತ್ಸವ ಫೆ.15ರಿಂದ

■ ವಿಜಯಸಾಕ್ಷಿ ಸುದ್ದಿ, ಗದಗ

ಮೌನಯೋಗಿ ಚಿಕೇನಕೊಪ್ಪದ ಶ್ರೀ ಚನ್ನವೀರ ಶರಣರ 29ನೇ ಪುಣ್ಯಸ್ಮರಣೋತ್ಸವ ಹಾಗೂ ಜಾತ್ರಾ ಮಹೋತ್ಸವ ಫೆ. 15ರಿಂದ 17ರವರೆಗೆ ಜರುಗಲಿದೆ. ಫೆ. 16ರಂದು ಸಂಜೆ 5 ಗಂಟೆಗೆ ಮಹಾರಥೋತ್ಸವ ಜರುಗಲಿದ್ದು, ಜಾತ್ರಾ ಮಹೋತ್ಸವದ ಅಂಗವಾಗಿ ಮಹಾತ್ಮರ ಜೀವನ ದರ್ಶನ ಪ್ರವಚನ, ಲಘು ರಥೋತ್ಸವ, ಸಾಮೂಹಿಕ ವಿವಾಹ, ಸುಮಂಗಲೆಯರಿಗೆ ಉಡಿ ತುಂಬುವುದು, ಜಾನಪದ ಕಲಾಮೇಳ, ತುಲಾಭಾರ, ಧಾರ್ಮಿಕ ಚಿಂತನಗೋಷ್ಠಿ ಹಾಗೂ ಶರಣಶ್ರೀ ಪ್ರಶಸ್ತಿ ಪ್ರದಾನ ನೆರವೇರಲಿದೆ ಎಂದು ಬಳಗಾನೂರಿನ ಪೂಜ್ಯಶ್ರೀ ಶಿವಶಾಂತವೀರ ಶರಣರು ಹೇಳಿದರು.




ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಫೆ. 15ರ ಬೆಳಿಗ್ಗೆ 8 ಗಂಟೆಗೆ ಇಟಗಿಯ ಮೇಲು ಗದ್ದುಗೆ ಹಿರೇಮಠದ ಷ.ಬ್ರ..ಡಾ ಗುರುಶಾಂತೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಹಿರೇವಡ್ಡಟ್ಟಿ ಹಿರೇಮಠದ ಷ.ಬ್ರ. ವಿರೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಷಟಸ್ಥಲ ಧ್ವಜಾರೋಹಣ ನೆರವೇರಿಸಲಿದ್ದಾರೆ. ಸಂಜೆ 5 ಗಂಟೆಗೆ ಪ್ರಕಾಶ ಜಗದೀಶಪ್ಪ ಹುಗ್ಗಿ, ಶರಣರ ಬಳಗ ರೋಣ ಅವರ ಮಹಾಮನೆಯಿಂದ ರಥದ ಕಳಸ ಆಗಮಿಸುವುದು. ಸಂಜೆ 6 ಗಂಟೆಗೆ ಲಘು ರಥೋತ್ಸವ ಜರಗುವುದು.

ಸಂಜೆ 7 ಗಂಟೆಗೆ ಮಹಾತ್ಮರ ಜೀವನ ದರ್ಶನ ಪ್ರವಚನ ಮಂಗಲೋತ್ಸವ ಜರಗುವುದು. ಮುಂಡರಗಿಯ ಅನ್ನದಾನೇಶ್ವರ ಸಂಸ್ಥಾನಮಠದ ಪೂಜ್ಯಶ್ರೀ ಜ. ನಾಡೋಜ ಡಾ. ಅನ್ನದಾನ ಮಹಾಶಿವಯೋಗಿಗಳು ಸಾನ್ನಿಧ್ಯ ವಹಿಸುವರು. ಹೂವಿನಹಡಗಲಿ ಗವಿಮಠದ ಪೂಜ್ಯಶ್ರೀ ಡಾ. ಹಿರಿಯ ಶಾಂತವೀರ ಮಹಾಸ್ವಾಮಿಗಳು, ಅಣ್ಣಿಗೇರಿ ದಾಸೋಹಮಠದ ಪೂಜ್ಯಶ್ರೀ ಶಿವಕುಮಾರ ಮಹಾಸ್ವಾಮಿಗಳು ಹಾಗೂ ಖಜ್ಜಿಡೋಣಿಯ ಕೃಷ್ಣಾನಂದ ಶಾಸ್ತ್ರಿಗಳು ಸಮ್ಮುಖ ವಹಿಸುವರು. ಚುರ್ಚಿಹಾಳ ಹಿರೇಮಠದ ವೇ.ಮೂ. ಪುಟ್ಟರಾಜ ಶಾಸ್ತ್ರಿಗಳು ಪ್ರವಚನದ ಮಂಗಲದ ನುಡಿಗಳನ್ನಾಡುವರು. ಕಲಬುರಗಿಯ ಸಂಗಮೇಶ ಎಸ್.ನೀಲಾ ಸಂಗೀತ ನೀಡುವರು ಹಾಗೂ ಕುಷ್ಟಗಿಯ ಪ್ರತಾಪಕುಮಾರ ಹಿರೇಮಠ ತಬಲಾ ಸಾಥ್ ನೀಡುವರು. ನಂತರ ದಾನಿಗಳಿಂದ ಪೂಜ್ಯರಿಗೆ ತುಲಾಭಾರದ ಭಕ್ತಿಸೇವೆ ಜರುಗಲಿದೆ.

ಫೆ. 16ರ ಬೆಳಿಗ್ಗೆ 5 ಗಂಟೆಗೆ ಶ್ರೀ ಚನ್ನವೀರ ಶರಣರ ಕತೃ ಗದ್ದುಗೆಗೆ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ ಹಾಗೂ ಲಿಂಗದೀಕ್ಷೆ-ಅಯ್ಯಾಚಾರ ಜರಗುವುದು. ಮೈನಳ್ಳಿ ಹಾಗೂ ಬಿಕನಳ್ಳಿ ಹಿರೇಮಠದ ಸಿದ್ದೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಅಧ್ಯಕ್ಷತೆ ವಹಿಸುವರು. ಹುಬ್ಬಳ್ಳಿಯ ಚಿ.ಚ. ಶರಣರ ಅಂಧರ ಕಲ್ಯಾಣಾಶ್ರಮದ ವೇ. ಮೂ.ಬಸಯ್ಯಶಾಸ್ತ್ರಿಗಳು ಕಲ್ಯಾಣಮಠ, ಅಮರಾಪೂರದ ಚನ್ನವೀರ ಶಾಸ್ತ್ರಿಗಳು, ಶ್ರೀಮಠದ ವೈದಿಕ ಪಾಠಶಾಲೆಯ ವಿದ್ಯಾರ್ಥಿಗಳಿಂದ ವೈದಿಕ ಕಾರ್ಯಕ್ರಮಗಳು ಜರುಗುವವು.

ಬೆಳಿಗ್ಗೆ 10.30ಕ್ಕೆ ಶ್ರೀ ಚನ್ನವೀರ ಶರಣರ 29ನೇ ಪುಣ್ಯಸ್ಮರಣೋತ್ಸವ ಹಾಗೂ ಸಾಮೂಹಿಕ ವಿವಾಹ ಮಹೋತ್ಸವ ಜರಗುವುದು. ಈ ಕಾರ್ಯಕ್ರಮದಲ್ಲಿ ಶಿರಹಟ್ಟಿ-ಬಾಲೇಹೊಸೂರ ಸಂಸ್ಥಾನಮಠದ ಪೂಜ್ಯಶ್ರೀ ಜ.ಫಕೀರ ದಿಂಗಾಲೇಶ್ವರ ಮಹಾಸ್ವಾಮಿಗಳು ಹಾಗೂ ಹೊಸಳ್ಳಿ ಬೂದೀಶ್ವರ ಸಂಸ್ಥಾನಮಠದ ಪೂಜ್ಯಶ್ರೀ ಜ. ಅಭಿನವ ಬೂದೀಶ್ವರ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಕುಂದಗೋಳ ಕಲ್ಯಾಣಮಠದ ಪೂಜ್ಯಶ್ರೀ ಅಭಿನವ ಬಸವಣ್ಣನವರು, ಗದುಗಿನ ವಿರೇಶ್ವರ ಪುಣ್ಯಾಶ್ರಮದ ಪೂಜ್ಯಶ್ರೀ ಡಾ.ಕಲ್ಲಯ್ಯಜ್ಜನವರು, ಚಿಕ್ಕಮಲ್ಲಿಗವಾಡ ಶ್ರೀಆಶ್ರಮದ ಎ.ಪಿ. ಪಾಟೀಲ ಗುರೂಜಿ ಸಮ್ಮುಖ ವಹಿಸುವರು.

ಬೆಂಗಳೂರಿನ ಮಹೇಶಕುಮಾರ ಹೇರೂರ ಹಾಗೂ ಸಂಗಡಿಗರಿಂದ ಸಂಗೀತ, ಸಂಜೆ 4ಕ್ಕೆ ಬಳಗಾನೂರಿನ ಶರಣರ ಬಳಗ ಹಾಗೂ ಡಾ. ಶಿವಕುಮಾರಯ್ಯ ಹಿರೇಮಠರ ಮಹಾಮನೆಯಿಂದ ರಥದ ಹಗ್ಗವನ್ನು ತರಲಾಗುವುದು. ಇದೇ ಸಂದರ್ಭದಲ್ಲಿ ಸಿದ್ದಲಿಂಗನಗೌಡ ಎಸ್. ಜಂಗ್ಲಿಪ್ಪಗೌಡ್ರ ಮೆಮೋರಿಯಲ್ ಉಮಾ ವಿದ್ಯಾಶ್ರೀ ಟ್ರಸ್ಟ್ ನವಲಗುಂದ ಇವರ ಸಂಯುಕ್ತಾಶ್ರಯದಲ್ಲಿ ಕ್ರೀಡೆ ಹಾಗೂ ಗಣಿತ ವಿಭಾಗದಲ್ಲಿ ರಾಷ್ಟ್ರಮಟ್ಟದ ಸಾಧನೆ ಮಾಡಿದ ಕಾರಟಗಿಯ ಜೆ.ಪಿ.ನಗರದ ಸಂಜಯ ಜೆ.ಸಿ.ಅವರಿಗೆ ಮತ್ತು ರಾಜ್ಯೋತ್ಸವ ಪ್ರಶಸ್ತಿ ವಿಜೇತ ಬಳ್ಳಾರಿಯ ದಿ. ಎಸ್. ಕೆ.ಆರ್ ಜಿಲಾನಿ ಬಾಷಾ ಶ್ರೀಲಕ್ಷ್ಮಿ ಕಲಾಕ್ಷೇತ್ರ ತಂಡಕ್ಕೆ ಶರಣಶ್ರೀ ಪ್ರಶಸ್ತಿ ನೀಡಲಾಗುವುದು.

ಸಂಜೆ 5ಕ್ಕೆ ಪೂಜ್ಯಶ್ರೀ ಜಗದ್ಗುರುಗಳ, ಹರಗುರು ಚರಮೂರ್ತಿಗಳ ನೇತೃತ್ವದಲ್ಲಿ ಮಹಾರಥೋತ್ಸವ ಜರುಗುವುದು. ಸಂಜೆ 6ಕ್ಕೆ ಧಾರ್ಮಿಕ ಚಿಂತನಗೋಷ್ಠಿ ನಡೆಯಲಿದ್ದು, ಕೊಪ್ಪಳ ಗವಿಮಠ ಸಂಸ್ಥಾನದ ಪೂಜ್ಯಶ್ರೀ ಜ. ಗವಿಸಿದ್ದೇಶ್ವರ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಶೇಗುಣಸಿ ವಿರಕ್ತಮಠದ ಪೂಜ್ಯಶ್ರೀ ಡಾ. ಮಹಾಂತಪ್ರಭು ಮಹಾಸ್ವಾಮಿಗಳು ಉಪದೇಶಾಮೃತ ನೀಡುವರು. ಹೆಬ್ಬಾಳ ಬ್ರಹನ್ಮಠದ ಪೂಜ್ಯಶ್ರೀ ನಾಗಭೂಷಣ ಶಿವಾಚಾರ್ಯ ಮಹಾಸ್ವಾಮಿಗಳು, ಅಣದೂರ ನೀಲಕಂಠೇಶ್ವರ ಮಠದ ಪೂಜ್ಯಶ್ರೀ ಶಿವಯೋಗಿ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಗುಡದೂರಿನ ಪೂಜ್ಯಶ್ರೀ ನೀಲಕಂಠ ತಾತನವರು ಸಮ್ಮುಖ ವಹಿಸುವರು. ಬೆಂಗಳೂರಿನ ಮಹೇಶಕುಮಾರ ಹೇರೂರ ಸಂಗಡಿಗರಿಂದ ಹಾಗೂ ನಗರಸಭೆ ಮಾಜಿ ಅಧ್ಯಕ್ಷ ಪೀರಸಾಬ ಕೌತಾಳರ ಪುತ್ರಿ ದಿಯಾ ಕೌತಾಳರಿಂದ ವಿಶೇಷ ಸಂಗೀತ ಕಾರ್ಯಕ್ರಮ ಜರುಗುವುದು.

ಈ ಎಲ್ಲ ಪವಿತ್ರ ಕಾರ್ಯಕ್ರಮಗಳಲ್ಲಿ ನಾಡಿನ ಸಮಸ್ತ ಭಕ್ತರು ಭಾಗವಹಿಸಿ ತನು-ಮನ-ಧನದಿಂದ ಸೇವೆ ಸಲ್ಲಿಸಿ ಶ್ರೀ ಶರಣರ ಕೃಪೆಗೆ ಪಾತ್ರರಾಗಬೇಕೆಂದು ಶ್ರೀ ಶಿವಶಾಂತವೀರ ಶರಣರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಎ.ಎನ್. ನಾಗರಳ್ಳಿ, ವಿ.ಬಿ. ಪೊಲೀಸ್‌ಪಾಟೀಲ, ಎಂ.ಬಿ. ಸಿಕ್ಕೇದೇಸಾಯಿ, ವಿ.ಎಸ್. ಹಿರೇಮಠ, ಎಸ್.ಬಿ. ಪಾಟೀಲ, ಮಹದೇವಪ್ಪ ಗೌರಿಪುರ, ಎಸ್. ಎಸ್. ಪಾಟೀಲ, ಶಿವಲಿಂಗಶಾಸ್ತ್ರಿ ಹಿರೇಮಠ ಸಿದ್ದಾಪೂರ, ಶಶಿಧರ ಗೂಳರಡ್ಡಿ, ಬಿ.ವೈ. ಡೊಳ್ಳಿನ, ವಿಶ್ವನಾಥ ಕಮ್ಮಾರ ಮುಂತಾದವರಿದ್ದರು.

ಫೆ. 17ರಂದು ಸಂಜೆ 5 ಗಂಟೆಗೆ ಕಡುಬಿನ ಕಾಳಗ ಹಾಗೂ ಸುಕ್ಷೇತ್ರ ಬಳಗಾನೂರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಶ್ರೀಚನ್ನವೀರ ಶರಣರ ಬೆಳ್ಳಿಮೂರ್ತಿ ಉತ್ಸವ ಜರುಗುವುದು. ನಂತರ ಶ್ರೀಮಠದಲ್ಲಿ ಕಡುಬಿನ ಕಾಳಗ ನಡೆಯಲಿದೆ. ಸಂಜೆ 5.30ಕ್ಕೆ ಶಿರಗುಪ್ಪಿಯ ಸ್ವಾಮಿ ವಿವೇಕಾನಂದ ಯೋಗ ಮತ್ತು ಮಲ್ಲಕಂಬ ತರಬೇತಿ ಕೇಂದ್ರ ಇವರಿಂದ ಮಲ್ಲಕಂಬ ಪ್ರದರ್ಶನ, ಶರಣಶ್ರೀ ಪ್ರಶಸ್ತಿ ಪ್ರದಾನ, ಸಂಜೆ 6.30ಕ್ಕೆ ಬೆಂಗಳೂರಿನ ಸುಧಾ ಬರಗೂರರಿಂದ ಹಾಸ್ಯ ಸಂಜೆ, ಕೊಪ್ಪಳದ ಗಾಯಕಿ ಗಂಗಮ್ಮರಿಂದ ಸಂಗೀತ ಸುಧೆ ಕಾರ್ಯಕ್ರಮ ನಡೆಯಲಿದೆ. ರಾತ್ರಿ 9ಕ್ಕೆ ಸಿಡಿಮದ್ದು ಪ್ರದರ್ಶನ ಜರುಗಲಿದೆ.

## ಸಿ.ಎಸ್. ಮುತ್ತಿನಪೆಂಡಿಮಠ ಪ್ರತಿಷ್ಠಾನದಿಂದ 1 ಲಕ್ಷ ರೂ.ದೇಣಿಗೆ

# ವಿಶೇಷ ಮಕ್ಕಳ ಭವಿಷ್ಯ ಉಜ್ವಲವಾಗಲಿ

■ ವಿಜಯಸಾಕ್ಷಿ ಸುದ್ದಿ, ಗದಗ

ಗದುಗಿನ ಸೇವಾ ಭಾರತಿ ಟ್ರಸ್ಟ್‌ನ ಅರುಣೋದಯ ವಿಶೇಷ ಅಗತ್ಯವುಳ್ಳ ಮಕ್ಕಳ ಶಾಲೆಗೆ ಗದುಗಿನ ಸಿ.ಎಸ್. ಮುತ್ತಿನಪೆಂಡಿಮಠ ಪ್ರತಿಷ್ಠಾನವು ಒಂದು ಲಕ್ಷ ರೂ.ಗಳನ್ನು ಸೋಮವಾರ ದೇಣಿಗೆ ನೀಡಿದೆ.




ಕಳೆದ ಒಂದು ದಶಕದಿಂದ ವಿಶೇಷ ಅಗತ್ಯವುಳ್ಳ ಮಕ್ಕಳ ಪುನಶ್ಚೇತನ ಹಾಗೂ ಶಿಕ್ಷಣ ಸೇವೆಯನ್ನು ಸರಕಾರದ ಯಾವುದೇ ಅನುದಾನವಿಲ್ಲದೆ ಸಮಾಜಮುಖಿಯಾಗಿ ಸೇವೆ ಸಲ್ಲಿಸುವದನ್ನು ಮನಗಂಡು, ವಿಶೇಷ ಅಗತ್ಯವುಳ್ಳ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿರುವ ಟ್ರಸ್ಟ್ ಆರ್ಥಿಕವಾಗಿ ಬಲಿಷ್ಠಗೊಳ್ಳಲೆಂಬ ಸದುದ್ದೇಶದಿಂದ ಪ್ರತಿಷ್ಠಾನದ ಗೌರವಾಧ್ಯಕ್ಷ ಡಾ. ಎನ್.ಬಿ. ಪಾಟೀಲರು ಈ ಹಣವನ್ನು ವೈಯುಕ್ತಿಕವಾಗಿ ಪ್ರತಿಷ್ಠಾನದ ಮೂಲಕ ಶಾಲೆಯ ಆಡಳಿತ ಮಂಡಳಿಗೆ ನೀಡಿದರು.

ಶಾಲೆಯ ಸಭಾಂಗಣದಲ್ಲಿ ಸೋಮವಾರ ನಡೆದ ಔಪಚಾರಿಕ ಸಮಾರಂಭದಲ್ಲಿ ಸಿ.ಎಸ್. ಮುತ್ತಿನಪೆಂಡಿಮಠ ಪ್ರತಿಷ್ಠಾನ ಗೌರವಾಧ್ಯಕ್ಷ ಡಾ. ಎನ್.ಬಿ. ಪಾಟೀಲರು ಶಾಲಾ ಆಡಳಿತ ಮಂಡಳಿಯ ಉಪಾಧ್ಯಕ್ಷ ಲುಕ್ಕಣಸಾ ರಾಜೋಳಿ ಅವರಿಗೆ ಡಿ.ಡಿ.ಹಸ್ತಾಂತರಿಸಿ ಮಾತನಾಡಿ, ಇತ್ತಿಚೆಗೆ ಪ್ರತಿಷ್ಠಾನವು ಈ ಶಾಲೆಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಶಾಲೆಯ ವಿಶೇಷ ಅಗತ್ಯವುಳ್ಳ ಮಕ್ಕಳ ಹಾಗೂ ಶಾಲೆ ಸಲ್ಲಿಸುತ್ತಿರುವ ಸೇವೆಯನ್ನು ಮನಗಂಡು ಅಂದು ವಾಗ್ದಾನ ಮಾಡಿದಂತೆ ದೇಣಿಗೆ-ಯ ಡಿ.ಡಿ ನೀಡಿದ್ದೇವೆ. ಮಕ್ಕಳ ಭವಿಷ್ಯ ಉಜ್ವಲವಾಗಲಿ ಎಂದು ಹಾರೈಸಿದರು.

ಪ್ರತಿಷ್ಠಾನದ ಅಧ್ಯಕ್ಷ ವಸಂತ ಮೇಟಿ ಸಂದರ್ಭೋಚಿತವಾಗಿ ಮಾತನಾಡಿದರು. ಜಯರಾಜ ಮುಳಗುಂದ ಸ್ವಾಗತಿಸಿದರು. ಕಾರ್ಯದರ್ಶಿ ಚಂದ್ರು ಬಾಳಿಹಳ್ಳಿಮಠ ಪ್ರಾಸ್ತಾವಿಕವಾಗಿ ಮಾತನಾಡಿ ನಿರೂಪಿಸಿದರು. ಲುಕ್ಕಣಸಾ ರಾಜೋಳಿ ವಂದಿಸಿದರು.

ಸಮಾರಂಭದಲ್ಲಿ ಪ್ರತಿಷ್ಠಾನದ ಪದಾಧಿಕಾರಿಗಳಾದ ಸಂಗಮೇಶ್ವರ ಬಂಗಾರಶೆಟ್ಟರ, ಮಲ್ಲಿಕಾರ್ಜುನ ಸಿಕ್ಕೇದೇಸಾಯಿ, ವಿಜಯಾನಂದ ಮುತ್ತಿನಪೆಂಡಿಮಠ, ಲತಾ ಮುತ್ತಿನಪೆಂಡಿಮಠ, ವಿಜಯಕುಮಾರ ಗಡ್ಡಿ, ಅಮರನಾಥ ಮಲ್ಲಾಡದ, ಈಶ್ವರಸಾ ಮೇರವಾಡೆ, ಜಾಕೀರಹುಸೇನ ಮುಜಾವರ, ಎಸ್.ಪಿ. ಸಂಶಿಮಠ, ಈಶ್ವರಪ್ಪ ಮುನವಳ್ಳಿ, ಸಿದ್ಧಣ್ಣ ಮಾರನಬಸರಿ, ಎಫ್.ಎಸ್. ಸಿಂದಗಿ, ಪ್ರಸನ್ನ ಶಾಬಾದಿಮಠ, ಮಲ್ಲನಗೌಡ ಚೆನ್ನಪ್ಪಗೌಡ್ರ, ಬಸವರಾಜ ನಾಗಲಾಪೂರ, ಶಾಂತಯ್ಯ, ಅಭಿಷೇಕ, ಕಾರ್ತಿಕ ಮುತ್ತಿನಪೆಂಡಿಮಠ ಮುಂತಾದವರಿದ್ದರು.

# ವಿದ್ಯಾರ್ಥಿಗಳಿಗೆ ಉಪನ್ಯಾಸ ಕಾರ್ಯಕ್ರಮ ಇಂದು

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಪಟ್ಟಣದ ಎಸ್‌ಎವಿವಿಪಿ ಸಮಿತಿಯ ಶ್ರೀ ಅನ್ನದಾನ ವಿಜಯ ಪ್ರೌಢಶಾಲೆ ಸಭಾಂಗಣದಲ್ಲಿ ಫೆ. 13ರ ಮುಂಜಾನೆ 10ಕ್ಕೆ 1972-1973ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಸಹಯೋಗದೊಂದಿಗೆ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಶೃಂಗೇರಿಯ ಅಂತಾರಾಷ್ಟ್ರೀಯ ತರಬೇತುದಾರ ಎನ್.ಸಿ. ಪಾಂಡುರಂಗ 'ಪರೀಕ್ಷೆ ಯುದ್ಧವಲ್ಲ ನಿಮ್ಮೊಳಗಿನ ವಿಷಯ ಹೊರ ಹಾಕುವ ಒಂದು ಸಹಜ ಕ್ರಿಯೆ' ಮತ್ತು ಪಟ್ಟಣದ ಡಾ. ಬಸವರಾಜ ದಿಂಡೂರರಿಂದ 'ಗೆಲುವಿನ ಸೋಪಾನ ಆತ್ಮವಿಶ್ವಾಸ' ಎನ್ನುವ ವಿಷಯ ಕುರಿತು ಉಪನ್ಯಾಸ ನಡೆಯಲಿದೆ.

ಸಂಸ್ಥೆಯ ಅಧ್ಯಕ್ಷರಾದ, ಹಾಲಕೆರೆಯ ಶ್ರೀ ಅನ್ನದಾನೇಶ್ವರ ಸಂಸ್ಥಾನ ಮಠದ ಪೀಠಾಧಿಪತಿಗಳಾದ ಜ.ಮುಪ್ಪಿನ ಬಸವಲಿಂಗ ಮಹಾಸ್ವಾಮೀಜಿಯವರು ದಿವ್ಯ ಸಾನಿಧ್ಯ ಹಾಗೂ ಆಡಳಿತ ಮಂಡಳಿಯ ಚೇರಮನ್ ಎಸ್.ಬಿ. ಹರ್ಲಾಪೂರ ಅಧ್ಯಕ್ಷತೆ ವಹಿಸಲಿದ್ದು, ಎಸ್‌ಎವಿವಿಪಿ ಸಮಿತಿಯ ಪ್ರಧಾನ ಕಾರ್ಯದರ್ಶಿ ರವೀಂದ್ರನಾಥ ದೊಡ್ಡಮೇಟಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಆಡಳಿತಾಧಿಕಾರಿ ಎನ್.ಆರ್. ಗೌಡರ, ರೋಣ ಬಿಇಒ ರುದ್ರಪ್ಪ ಹುರಳಿ, ರೋಣ ಪ್ರಧಾನಮಂತ್ರಿ ಪೋಷಣ್ ಶಕ್ತಿ ನಿರ್ಮಾಣ ಯೋಜನೆಯ ಸಹಾಯಕ ನಿರ್ದೇಶಕ ಬಸವರಾಜ ಅಂಗಡಿ, ರೋಣ ಬಿಆರ್‌ಸಿ ಸಂಯೋಜನಾಧಿಕಾರಿ ಎಮ್.ಎ. ಫಣಿಬಂದ, ಆಡಳಿತ ಮಂಡಳಿಯ ಸದಸ್ಯರಾದ ನಿಂಗನಗೌಡ ಲಕ್ಕನಗೌಡ್ರ, ಮಲ್ಲಣ್ಣ ಶಿರ್ಸಿ, ಷಣ್ಮುಖಪ್ಪ ಶಿದ್ನೇಕೊಪ್ಪ ಮುಂತಾದವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಶಾಲೆಯ ಮುಖ್ಯಶಿಕ್ಷಕ ಎಂ.ವಿ. ವೀರಾಪುರ ಪ್ರಕಟಣೆಗೆ ತಿಳಿಸಿದ್ದಾರೆ.

# ಬೆಳಹೊಡ ಗ್ರಾಮದಲ್ಲಿ ಸಂವಿಧಾನ ಜಾಗೃತಿ ಕಾರ್ಯಕ್ರಮ




■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ತಾಲೂಕಿನ ಬೆಳಹೊಡ ಗ್ರಾಮ ಪಂಚಾಯತ್‌ನಲ್ಲಿ ರವಿವಾರದಂದು ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಸ್ವಾಗತಿಸಿ, ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಎಲ್ಲಾ ಸದಸ್ಯರು, ಸಾರ್ವಜನಿಕರು ಹಾಗೂ ಅಧಿಕಾರಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಸಂವಿಧಾನ ಪೀಠಿಕೆಯನ್ನು ಜನಸಾಮಾನ್ಯರಿಗೆ ಅರ್ಥೈಸಬೇಕು. ಈ ಮೂಲಕ ಜನ ಸಾಮಾನ್ಯರು ಸಹ ಸಂವಿಧಾನವನ್ನು ಅರಿತು ತಮ್ಮ ಹಕ್ಕು ಕರ್ತವ್ಯಗಳನ್ನು ಪಾಲಿಸಬೇಕು. ಸಂವಿಧಾನ ದತ್ತವಾಗಿ ಇರುವ ಹಕ್ಕುಗಳ ಮೂಲಕ ಸಮ ಸಮಾಜ ನಿರ್ಮಾಣಕ್ಕೆ ಜನ ಸಾಮಾನ್ಯರೆಲ್ಲರೂ ಒಂದು ಎಂಬ ಭ್ರಾತೃತ್ವ ಭಾವನೆ ಮೂಡಿಸುವ ಆಶಯುವನ್ನು ಸಂವಿಧಾನ ಜಾಗೃತಿ ಕಾರ್ಯಕ್ರಮ ಒಳಗೊಂಡಿದೆ.

# ತೆಲ್ಲೂರ ಶಾಸ್ತ್ರೀಗಳಿಗೆ ಶ್ರೀಗಳಿಂದ ಸನ್ಮಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಜೀವಮಾನ ಸಾಧನೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕುಮಾರವ್ಯಾಸ ಪ್ರಶಸ್ತಿಗೆ ಭಾಜನರಾದ ನಾಡಿನ ಹಿರಿಯ ಕಲಾವಿದ, ಗದುಗಿನ ಸಿದ್ದೇಶ್ವರ ಶಾಸ್ತ್ರೀ ತೆಲ್ಲೂರರನ್ನು ನಗರದ ಅಡವೀಂದ್ರಸ್ವಾಮಿ ಮಠದಲ್ಲಿ ಅಖಿಲ ಭಾರತ ಜಂಗಮ ಸೇವಾ ಸಮಿತಿ ಏರ್ಪಡಿಸಿದ್ದ ಸಮಾರಂಭದಲ್ಲಿ ಸನ್ಮಾನಿಸಲಾಯಿತು.



ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಮುಂಡರಗಿ ಅನ್ನದಾನೀಶ್ವರ ಸಂಸ್ಥಾನಮಠದ ಪೂಜ್ಯಶ್ರೀ ನಾಡೋಜ ಜ. ಡಾ. ಅನ್ನದಾನೇಶ್ವರ ಮಹಾಶಿವಯೋಗಿಗಳು ಸಾಧಕರಾದ ಸಿದ್ದೇಶ್ವರ ಶಾಸ್ತ್ರೀಗಳು ತೆಲ್ಲೂರರಿಗೆ ಶಾಲು ಹೊದೆಸಿ ಫಲಪುಷ್ಪದೊಂದಿಗೆ ಅಭಿನಂದನಾ ಪತ್ರ ನೀಡಿ ಆಶೀರ್ವದಿಸಿ, ಬಿ.ಹೈಗ್ರೇಡ್ ಕಲಾವಿದರಾಗಿರುವ ತೆಲ್ಲೂರರು ಕಥಾ ಕೀರ್ತನೆ ಕ್ಷೇತ್ರದಲ್ಲಿ ಸುದೀರ್ಘ ಸೇವೆ, ಸಂಗೀತ, ಸಾಹಿತ್ಯ ರಂಗದಲ್ಲಿ ಸಲ್ಲಿಸಿದ ಸೇವೆ ದೊಡ್ಡದು. ಭವಿಷ್ಯದಲ್ಲಿ ಅವರು ಇನ್ನೂ ಹೆಚ್ಚಿನ ಸಾಧನೆ ಮಾಡಲಿ ಎಂದರು.

ಅಡವಿಂದ್ರ ಸ್ವಾಮಿಗಳ ಮಠದ ಧರ್ಮದರ್ಶಿ ಮಹೇಶ್ವರಸ್ವಾಮಿಗಳು ಹೊಸಳ್ಳಿಮಠ ಸೇರಿದಂತೆ ಅನೇಕ ಗಣ್ಯರು, ಸೇವಾ ಸಮಿತಿಯ ಪದಾಧಿಕಾರಿಗಳಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka